ANANTHKUMAR PRATISHTHANA

# ಅನಂತಪಥ

ಸಂಪುಟ - 2 ಮಾರ್ಚ್ - 2022 ಸಂಚಿಕೆ - 21



ನಾನು ಕಂಡಂತೆ ಅನಂತಕುಮಾರ್

**ನಿತಿನ್ ಗಡ್ಕರಿ**

ರಾಷ್ಟ್ರನಿರ್ಮಾಣದ ಪಥದಲ್ಲಿ ಸಾಗಿದ ಅನಂತಕುಮಾರ್ ಪುಟ 2

# ಅನಂತ ಹೃದಯಕ್ಕೆ ಹತ್ತಿರವಾದ ಗೀತೆ



"ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂಬುದು ಗೀತೆಯ ಜಗತ್ಪ್ರಸಿದ್ಧ ಹೇಳಿಕೆ. ನಿನಗೆ ಕೆಲಸ ಮಾಡುವ ಅಧಿಕಾರ ಮಾತ್ರವಿದೆ, ಅದರ ಫಲದ ಮೇಲಿಲ್ಲ ಎಂಬ ಗೀತಾ ಸಂದೇಶವನ್ನು ಅನಂತಕುಮಾರರು ತಮ್ಮ ಜೀವನದಲ್ಲಿ ತತ್ತ್ವಶಃ ಪಾಲಿಸಿಕೊಂಡು ಬಂದರು. ಇಂದು ನಾವು ಅವರ ಜೀವನ ಚರಿತ್ರೆಯನ್ನು ದಾಖಲಿಸಲು ತೊಡಗಿದಾಗ ಎದುರಾಗುವ ಅನೇಕ ಹೊಸ ಹೊಸ ಸಂಗತಿಗಳು ನಮಗೆ ಅಚ್ಚರಿ ಉಂಟು ಮಾಡುತ್ತವೆ. ಇವರು ಇಷ್ಟೊಂದು ಕೆಲಸ ಮಾಡಿದ್ದರಾ? ಇವರ ಸಾಧನೆಗಳ ಸಮಗ್ರ ದಾಖಲೆ ಎಲ್ಲಿಯೂ ಒಂದೆಡೆ ಏಕೆ ಸಿಗುವುದಿಲ್ಲ? ಕಾರಣವಿಷ್ಟೇ, "ಪರೋಪಕಾರಾರ್ಥಮಿದಂ ಶರೀರಂ" ಎಂದುಕೊಂಡು ಅವರು ಕೆಲಸ ಮಾಡುತ್ತಲೇ ಹೋದರು, ತಮ್ಮ ಸಾಧನೆಗಳ ಮೇಲೆ ಅವರಿಗೆ ಎಂದೂ ಮಮಕಾರವಿರಲಿಲ್ಲ. ಹೀಗಾಗಿ, ಇತರ ಸಮಕಾಲೀನ ರಾಜಕೀಯ ನಾಯಕರಂತೆ ಡಂಗುರ ಬಾರಿಸಿಕೊಂಡು ಪ್ರಚಾರ ಮಾಡುವುದು ಅವರಿಗೆ ಒಗ್ಗದ ವಿಷಯವಾಗಿತ್ತು. ಜೀವನದುದ್ದಕ್ಕೂ ಭಗವದ್ಗೀತೆ ಅನಂತಕುಮಾರರ ಸತತವಾದ ಸಂಗಾತಿಯಾಗಿತ್ತು. ಪ್ರತಿ ದಿನ ಗೀತೆಯ ಕೆಲವು ಶ್ಲೋಕಗಳನ್ನು ಓದದೆ ಅವರು ತಮ್ಮ ದೈನಂದಿನ ಕಾರ್ಯದಲ್ಲಿ ತೊಡಗಿಕೊಳ್ಳುತ್ತಿರಲಿಲ್ಲ. ಅವರಲ್ಲಿ ಈ ಪರಿಪಾಠವನ್ನು ರೂಢಿಸಿದವರು, ತಾಯಿ ಶ್ರೀಮತಿ ಗಿರಿಜಾ ಶಾಸ್ತ್ರಿ. ಮಗನಲ್ಲಿ ಯದುಕುಲ ತಿಲಕನನ್ನು ನೋಡುತ್ತ "ನಾಡಿನ ದೊರೆಯಾಗು" ಎಂದು ನಿತ್ಯವೂ ಹರಸುತ್ತಿದ್ದ ತಾಯಿ ಅಷ್ಟಕ್ಕೇ ಸೀಮಿತರಾಗಲಿಲ್ಲ. ನಾಡಿನ ದೊರೆಗೆ ಅಗತ್ಯವಾದ ಚಾರಿತ್ರ್ಯ ನಿರ್ಮಾಣದ ತರಬೇತಿ ಮತ್ತು ಶಿಕ್ಷಣವನ್ನೂ ನೀಡಿದರು.



ಈ ನಿಟ್ಟಿನಲ್ಲಿ ತಮ್ಮ ಎಂಟು ವರ್ಷದ ಮಗನಿಗೆ ಕನ್ನಡದಲ್ಲಿ ಅರ್ಥಸಹಿತವಾಗಿ ಮುದ್ರಿಸಿದ್ದ ಗೀತೆಯ ಪ್ರತಿಯೊಂದನ್ನು ನೀಡಿ, ಪ್ರತಿದಿನ ಅದನ್ನು ಓದುವುದಲ್ಲದೆ ಪ್ರತಿಯೊಂದು ಶ್ಲೋಕದ ಅರ್ಥವನ್ನು ಮನನ ಮಾಡಿಕೊಳ್ಳುವಂತೆ ಪ್ರೇರೇಪಿಸಿದರು.

ತಾಯಿ ಗಿರಿಜಾ ಶಾಸ್ತ್ರಿಯವರು ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಕಡೆ ವಿಶೇಷ ಗಮನ ಹರಿಸಿದ್ದರು. ಈ ದಿಸೆಯಲ್ಲಿ ತಾವು ವಾಸವಾಗಿದ್ದ ಕಾಲೋನಿಯಲ್ಲಿ ಪೂರ್ವ ಪ್ರಾಥಮಿಕ ಶಾಲೆಯನ್ನು ತಾವೇ ತೆರೆದರು. ಶಾಲಾ ಶಿಕ್ಷಣದ ಜೊತೆಗೆ ತಮ್ಮ ಕುಟುಂಬದ ಧಾರ್ಮಿಕ ಶ್ರದ್ಧೆ, ಭಕ್ತಿ ಮತ್ತು ಪುಸ್ತಕದ ಆಸಕ್ತಿಗಳು ತಮ್ಮ ಮಕ್ಕಳ ಮೂಲಕ ಮುಂದುವರೆಯಬೇಕೆಂಬ ಉದ್ದೇಶದಿಂದ ಅದಕ್ಕೆ ತಕ್ಕ ಉಪಕ್ರಮಗಳನ್ನೂ ಪ್ರಾರಂಭಿಸಿದರು. ಪ್ರಮುಖವಾಗಿ, ತಮ್ಮ ಶಾಲೆ ನಡೆಯುತ್ತಿದ್ದ ಜಾಗದಲ್ಲಿ ಭಗವದ್ಗೀತೆಯ ತರಗತಿಯನ್ನು ಪ್ರಾರಂಭಿಸಿ ವ್ಯವಸ್ಥಿತ ರೀತಿಯಲ್ಲಿ ಗೀತೆಯನ್ನು ಮಕ್ಕಳಿಗೆ ಬೋಧಿಸುವ ವ್ಯವಸ್ಥೆ ಮಾಡಿದರು. ಪ್ರತಿ ಭಾನುವಾರ ನಡೆಯುತ್ತಿದ್ದ ಈ ತರಗತಿಗಳಲ್ಲಿ ಅನಂತಕುಮಾರರು ಉತ್ಸಾಹದಿಂದ ಹಾಜರಾಗುತ್ತಿದ್ದರು.

ಹುಬ್ಬಳ್ಳಿಯಲ್ಲಿ ನಡೆದ ಸ್ವಾಮೀ ಚಿನ್ಮಯಾನಂದರ ಗೀತಾ ಪ್ರವಚನ ಸಪ್ತಾಹದ ಸಂಚಾಲಕರಲ್ಲಿ ಒಬ್ಬರಾಗಿದ್ದ ಗಿರಿಜಾ ಶಾಸ್ತ್ರಿಯವರನ್ನು ಅವರ ಶ್ರದ್ಧೆ ಮತ್ತು ಆಸಕ್ತಿಗಳನ್ನು ಗುರುತಿಸಿ ಸಪ್ತಾಹದ ಕೊನೆಯಲ್ಲಿ ಸನ್ಮಾನಿಸಲಾಗಿತ್ತು. ತಾಯಿಗೆ ದೊರೆತ ಮನ್ನಣೆಯಿಂದಲೂ ಅನಂತಕುಮಾರರು ಪ್ರಭಾವಿತರಾಗಿದ್ದರು.

"ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು" ಎಂಬ ಕವಿವಾಣಿಯಂತೆ ಗಿರಿಜಾ ಶಾಸ್ತ್ರಿಯವರೂ ತಮ್ಮ ಮಗ ಗೀತೆಯ ಸಂದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಉನ್ನತಿಯನ್ನು ಸಾಧಿಸಬೇಕೆಂದು ಅಪೇಕ್ಷಿಸಿದ್ದರು. ಈ ರೀತಿಯಾಗಿ ಮನೆಯ ಒಳಗೆ ಮತ್ತು ಹೊರಗೆ ಸದಾ ಕಿವಿಗೆ ಬೀಳುತ್ತಿದ್ದ ಗೀತಾಚಾರ್ಯನ ಸಂದೇಶಗಳಿಗೆ ಅನುಗುಣವಾಗಿ ಬದುಕುತ್ತ ಗೀತೆಯನ್ನು ತಮ್ಮ ಹೃದಯಕ್ಕೆ ಹತ್ತಿರವಾಗಿರಿಸಿಕೊಂಡರು. ತಾಯಿಯ ಉಪದೇಶದಂತೆ ಭಗವದ್ಗೀತೆಯ ಪಠಣವನ್ನು ವ್ರತದಂತೆ ಪಾಲಿಸಿಕೊಂಡು ಬಂದರು.

ಶ್ರೀಮತಿ ಗಿರಿಜಾ ಶಾಸ್ತ್ರಿಯವರು ಇನ್ನೊಂದು ವಿಶಿಷ್ಟ ಪದ್ಧತಿಯನ್ನು ಪ್ರಾರಂಭಿಸಿ ಅದನ್ನು ಪಾಲಿಸಿಕೊಂಡು ಬಂದರು. ಪ್ರತಿ ವರ್ಷ ಯುಗಾದಿಯ ದಿನ, ಮನೆಯಲ್ಲಿ ಪ್ರತಿಯೊಬ್ಬರೂ ಭಗವದ್ಗೀತೆಯ ಪುಸ್ತಕದ ಯಾವುದಾದರೊಂದು ಪುಟವನ್ನು ತೆರೆದು ಆ ಪುಟದಲ್ಲಿ ತಮ್ಮ ಕಣ್ಣಿಗೆ ಬಿದ್ದ ಶ್ಲೋಕವನ್ನು ಓದಿ ಅದರ ಅರ್ಥವನ್ನು ಗ್ರಹಿಸಬೇಕು, ಹಾಗೂ ಆ ಸಂದೇಶವನ್ನು ತಮ್ಮ ಹೊಸವರ್ಷದ ಬದುಕಿನಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪವನ್ನು ತೆಗೆದುಕೊಳ್ಳಬೇಕು. ಈ ಹೊಸ ಸಂಪ್ರದಾಯವನ್ನು ಅನಂತಕುಮಾರರು ಕೊನೆಯವರೆಗೂ ಪಾಲಿಸಿದರು.

ಪುಟ 7 ರಲ್ಲಿ ಮುಂದುವರೆದಿದೆ



**ಅನಂತಪಥ ಮಾಸಪತ್ರಿಕೆಯ 20 ನೇ ಸಂಚಿಕೆಯನ್ನು ಶ್ರೀಮತಿ ಪ್ರತಿಭಾ ಪ್ರಭಾಕರ್ ಓಕ್ ಅವರು 22 ಫೆಬ್ರವರಿ 2022 ರಂದು ಬಿಡುಗಡೆ ಮಾಡಿದರು. ಇವರ ಮಕ್ಕಳಾದ ಛಾಯಾ ಬಾಪಟ್, ತೇಜಸ್ವಿನಿ ಅನಂತ್‌ಕುಮಾರ್, ಸೀಮಾ ಕಿಲ್ಲೇದಾರ್ ಉಪಸ್ಥಿತರಿದ್ದರು.**

ಅದಮ್ಯ ಚೇತನದ ಕಥೆ
ಡಾ. ತೇಜಸ್ವಿನಿ ಅನಂತಕುಮಾರ್
ಪುಟ 3

ಕಮಲಾದೇವಿ ಚಟ್ಟೋಪಾಧ್ಯಾಯ
ಕೆ ಜನಾರ್ದನ ತುಂಗ
ಪುಟ 9

ಚುನಾಯಿತ ಸದಸ್ಯರಿಗೆ ಪ್ರಶಿಕ್ಷಣ
ಪ್ರೊ. ಪಿ. ವಿ. ಕೃಷ್ಣ ಭಟ್
ಪುಟ 4

ಬಿಲ್ವಪತ್ರೆಯ ಮಹತ್ವ
ಛಾಯಾ ಓಕ್ ಬಾಪಟ್
ಪುಟ 8







# ರಾಷ್ಟ್ರನಿರ್ಮಾಣದ ಪಥದಲ್ಲಿ ಅನಂತಕುಮಾರ್

**ನಿತಿನ್ ಗಡ್ಕರಿ,** ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರು


ನಾನು ಭಾರತೀಯ ಜನತಾ ಪಕ್ಷದ ಅಧ್ಯಕ್ಷನಾದ ಮೇಲೆ ಮೊದಲ ಬಾರಿಗೆ ದೆಹಲಿಗೆ ಹೋದಾಗ ಅದೇ ಸಮಯದಲ್ಲಿ ನನ್ನ ಸಹೋದ್ಯೋಗಿಯಾಗಿ ಅನಂತಕುಮಾರರು ಪ್ರಧಾನ ಕಾರ್ಯದರ್ಶಿಯಾಗಿ ತಮ್ಮ ಕೆಲಸವನ್ನು ಆರಂಭಿಸಿದ್ದರು. ಜೊತೆಗೆ, ಭಾರತೀಯ ಜನತಾ ಪಕ್ಷದ ಪಾರ್ಲಿಮೆಂಟ್ ಬೋರ್ಡಿನ ಕಾರ್ಯದರ್ಶಿಯಾಗಿಯೂ ಕೆಲಸ ನಿರ್ವಹಿಸುತ್ತಿದ್ದರು. ವಿಶೇಷವಾಗಿ, ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ ಅನುಭವವು ಅವರಿಗಿತ್ತು. ಅನಂತಕುಮಾರರು ಯಾವಾಗಲೂ ಪಕ್ಷದ ಬಗ್ಗೆ ದೀರ್ಘವಾಗಿ ಚಿಂತನೆ ಮಾಡುತ್ತಿದ್ದರು. ವಿಶೇಷವಾಗಿ, ಪಕ್ಷದ ಅನೇಕ ಸವಾಲುಗಳನ್ನು ಎದುರಿಸಲು ನಮಗೆ ಸಹಕಾರಿಯಾಗಿದ್ದರು. ಅನೇಕ ಬಾರಿ ಹಲವಾರು ಸಮಸ್ಯೆಗಳನ್ನು ಏಕಕಾಲದಲ್ಲಿ ಎದುರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಅನೇಕ ಕಡೆ ಚುನಾವಣೆಗಳನ್ನು ಎದುರಿಸಬೇಕಾಗಿ ಬರುತ್ತಿತ್ತು; ಮುಖ್ಯಮಂತ್ರಿ ಸ್ಥಾನಗಳನ್ನು ನಿರ್ಣಯಿಸುವ ಪ್ರಸಂಗ ಎದುರಾಗುತ್ತಿತ್ತು. ಈ ಎಲ್ಲಾ ಪರಿಸ್ಥಿತಿಗಳನ್ನು ದಿಟ್ಟತನದಿಂದ ಎದುರಿಸುವ ಎದೆಗಾರಿಕೆ ಅನಂತಕುಮಾರರಿಗಿತ್ತು. ಸಂಘಟನೆ ಮಾಡುವ ಹಾಗೂ ಗುಂಪಿನಲ್ಲಿ ಹೇಗೆ ಕೆಲಸ ಮಾಡಬೇಕೆಂಬ ಅನುಭವ ಅವರ ವ್ಯಕ್ತಿತ್ವದಲ್ಲಿಯೇ ಅಡಕವಾಗಿತ್ತು.ಭಾರತೀಯ ಜನತಾ ಪಕ್ಷವು ಇತರ ಪಕ್ಷಗಳಿಗಿಂತ ಭಿನ್ನವಾಗಿದೆ. ಪಕ್ಷದ ಕಾರ್ಯಕರ್ತರ ನಡೆ, ನುಡಿ, ಚರಿತ್ರೆ, ವ್ಯವಹಾರಗಳು ಕೂಡ ಇತರರಿಗಿಂತ ಭಿನ್ನವಾಗಿವೆ. ಭಾರತೀಯ ಜನತಾ ಪಕ್ಷಕ್ಕೆ ಅದರದ್ದೇ ಆದ ಸಂಸ್ಕಾರವಿದೆ. ಎಲ್ಲಕ್ಕಿಂತ ಮೊದಲು ದೇಶ, ನಂತರ ಪಕ್ಷ, ಕೊನೆಯಲ್ಲಿ ವ್ಯಕ್ತಿ ಎಂಬ ಆದ್ಯತೆಗಳನ್ನು ಅನಂತಕುಮಾರ್ ಅವರು ತಮ್ಮ ಜೀವನದಲ್ಲಿ ಸತತವಾಗಿ ಪಾಲಿಸಿಕೊಂಡು ಬಂದಿದ್ದರು. "ಹಣ ಮತ್ತು ವ್ಯಕ್ತಿ-ಇವೆರಡರಲ್ಲಿ ವ್ಯಕ್ತಿ ಶ್ರೇಷ್ಠ, ವ್ಯಕ್ತಿ ಮತ್ತು ಪಕ್ಷದ ನಡುವೆ ಪಕ್ಷವೇ ಶ್ರೇಷ್ಠ, ಪಕ್ಷ ಮತ್ತು ವಿಚಾರಗಳಿಗೆ ಸಂಬಂಧಿಸಿದಂತೆ ವಿಚಾರವೇ ಶ್ರೇಷ್ಠವಾದದ್ದು. ನಮ್ಮ ದೇಶವನ್ನು ಸುಖಿ, ಸಮೃದ್ಧ ಮತ್ತು ವಿಶ್ವದ ಶಕ್ತಿಶಾಲಿ ರಾಷ್ಟ್ರವಾಗಿ ನಿರ್ಮಾಣ ಮಾಡುವ ವಿಚಾರಕ್ಕಾಗಿ ನಮ್ಮ ಪಕ್ಷ ಕೆಲಸ ಮಾಡುತ್ತಿದೆ. ಶಾಂತಿಸ್ಥಾಪನೆಗಾಗಿ ನಮ್ಮ ಸಾಮರ್ಥ್ಯವನ್ನು ನಾವು ಹೆಚ್ಚಿಸಿಕೊಳ್ಳಬೇಕು. ಆಗ ಮಾತ್ರ ಶಾಂತಿ ಸ್ಥಾಪನೆ ಮಾಡಲು ಸಾಧ್ಯ" ಎಂಬುದು ಅನಂತಕುಮಾರರ ಮತವಾಗಿತ್ತು.

ನಾನು ಕಂಡಂತೆ



ಅನಂತಕುಮಾರ್

ಅನಂತಕುಮಾರರು ಭಾರತೀಯ ಜನತಾ ಪಕ್ಷದ ಸಮರ್ಪಿತ ಕಾರ್ಯಕರ್ತರಾಗಿದ್ದರು. ಅವರು ಒಬ್ಬ ಸಮರ್ಥ ನಾಯಕರಾಗಿ ಅವರ ನಡವಳಿಕೆ ಮತ್ತು ಅವರ ಸ್ವಭಾವವನ್ನು ಹತ್ತಿರದಿಂದ ನೋಡಿದ ಸೌಭಾಗ್ಯ ನನಗಿದೆ. ನಾನು ಮೊದಲ ಬಾರಿಗೆ ಪಕ್ಷದ ಅಧ್ಯಕ್ಷನಾದಾಗ ಎಲ್ಲರಿಗಿಂತ ಕಿರಿಯವನಾಗಿದ್ದುದರಿಂದ ಹಿರಿಯ ನಾಯಕರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವುದು ನನಗೆ ಸ್ವಲ್ಪ ಕಷ್ಟವಾಗುತ್ತಿತ್ತು. ಅನಂತಕುಮಾರರಿಗೆ ಎಲ್ಲರ ಜೊತೆ ಒಳ್ಳೆಯ ಒಡನಾಟ ಇರುವುದರಿಂದ ಎಲ್ಲ ನಾಯಕರ ಅಭಿಪ್ರಾಯವನ್ನು ಸಂಗ್ರಹಿಸಿ ನೀಡುವ ಜವಾಬ್ದಾರಿಯನ್ನು ನಾನು ಅವರಿಗೆ ವಹಿಸುತ್ತಿದ್ದೆ. ಅವರು ನೀಡಿದ ಮಾಹಿತಿಯ ಆಧಾರದಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವುದು ಸುಲಭವಾಗುತ್ತಿತ್ತು. ಅನಂತಕುಮಾರರ ಇನ್ನೊಂದು ವಿಶೇಷತೆ ಏನೆಂದರೆ ಅವರಿಗೆ ಎಲ್ಲ ಕಾರ್ಯಕರ್ತರ ಮತ್ತು ಎಲ್ಲ ನಾಯಕರ ಜೊತೆ ಅವಿನಾಭಾವ ಸಂಬಂಧ ಮತ್ತು ಸ್ನೇಹವಿತ್ತು. ಎಲ್ಲಾ ಕಾರ್ಯಕರ್ತರ ಜೊತೆಗೆ ಅವರ ವ್ಯವಹಾರ ಕುಟುಂಬದ ಸದಸ್ಯರಂತೆ ಇರುತ್ತಿತ್ತು. ನಾನು ಪಕ್ಷದಲ್ಲಿ ಕಿರಿಯನಾಗಿದ್ದರೂ ಸಹ ನನಗೆ ಗೌರವ ಕೊಟ್ಟು ಮಾರ್ಗದರ್ಶನ ಮಾಡುತ್ತಿದ್ದರು. ಆದರೆ ಎಲ್ಲರೂ ತಮ್ಮ ಜೀವನದಲ್ಲಿ ಈ ರೀತಿಯಾಗಿ ವರ್ತಿಸುವುದು ಕಷ್ಟ. ಪಕ್ಷದಲ್ಲಿ ಅಧ್ಯಕ್ಷ, ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಮುಂತಾದ ಹುದ್ದೆಗಳಿರುತ್ತವೆ. ಎಲ್ಲರಿಗೂ ಪ್ರತ್ಯೇಕವಾದ ಕೆಲಸ ಮತ್ತು ಜವಾಬ್ದಾರಿಗಳಿರುತ್ತವೆ. ಆದರೆ ಎಲ್ಲರೂ ಸಾಮೂಹಿಕವಾಗಿ ಕಲೆತು ಕೆಲಸ ಮಾಡುವ ಪದ್ಧತಿ ವಿಕಸಿತವಾಗಬೇಕು ಎಂದು ಅಟಲ್ ಬಿಹಾರಿ ವಾಜಪೇಯಿ ಹೇಳುತ್ತಿದ್ದರು. ಅನಂತಕುಮಾರರು ಎಲ್ಲರ ಜೊತೆ ಸೇರಿಕೊಂಡು ಸಾಮೂಹಿಕವಾಗಿ ಗುಂಪಿನಲ್ಲಿ ಕೆಲಸ ಮಾಡುವ ವ್ಯಕ್ತಿಯಾಗಿದ್ದರು. ಇವತ್ತು ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ ನಮ್ಮ ಪಕ್ಷದ ಸಂಘಟನೆ ದೊಡ್ಡ ಮಟ್ಟದಲ್ಲಿ ಬೆಳೆದಿದೆ. ವಿಶ್ವದಲ್ಲಿ ಅತಿ ಹೆಚ್ಚು ಸದಸ್ಯತ್ವ ಮತ್ತು ಕಾರ್ಯಕರ್ತರ ಪಡೆಯನ್ನು ಹೊಂದಿರುವ ಪಕ್ಷವಾಗಿ ಬೆಳೆದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕೆಲಸ ಮಾಡುತ್ತಿದೆ.



ಇಂದು ನಮ್ಮ ಸಂಘಟನೆ ಶಕ್ತಿಶಾಲಿಯಾಗಿದೆ. ಆದರೆ ಪ್ರಾರಂಭದ ದಿನಗಳಲ್ಲಿ ನಮ್ಮ ಕಾರ್ಯಕರ್ತರಿಗೆ ಅಪಮಾನವಾಗುತ್ತಿತ್ತು. ಅನೇಕ ಚುನಾವಣೆಗಳಲ್ಲಿ ಸೋಲಾಗುತ್ತಿತ್ತು. ಅಪಹಾಸ್ಯ, ಅಪಮಾನ ಎಲ್ಲವನ್ನೂ ಸಹಿಸಿ ನಾವು ಮುಂದುವರಿಯಬೇಕಿತ್ತು. ಲಕ್ಷಾಂತರ ಕಾರ್ಯಕರ್ತರು ತಮ್ಮ ಜೀವನವನ್ನು ಪಕ್ಷಕ್ಕಾಗಿ ಸಮರ್ಪಿಸಿದ ಕಾರಣ ನಾವು ಇಂದು ಈ ಸ್ಥಾನದಲ್ಲಿದ್ದೇವೆ. ಆ ನಮ್ಮ ಕಾರ್ಯಕರ್ತರನ್ನು ನಾವು ಎಂದಿಗೂ ಮರೆಯುವುದಿಲ್ಲ. ಆ ಮರೆಯಬಾರದವರ ಸಾಲಿನಲ್ಲಿ ಅನಂತಕುಮಾರರು ಮೊದಲಿಗರಾಗಿದ್ದಾರೆ.

ಕರ್ನಾಟಕದ ರಾಜಕಾರಣದಲ್ಲಿಯೂ ಅನಂತಕುಮಾರರ ದೊಡ್ಡ ಕೊಡುಗೆಯಿದೆ. ಕರ್ನಾಟಕದಲ್ಲಿ ಪಕ್ಷವನ್ನು ಬೇರುಮಟ್ಟದಿಂದ ಸಂಘಟಿಸಿ ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ ಅಧಿಕಾರಕ್ಕೆ ತರಲು ಅನಂತಕುಮಾರರು ಪಟ್ಟ ಶ್ರಮ ಅಪಾರ. ಈ ಹಾದಿಯಲ್ಲಿ ನಾವು ಅನೇಕ ಕಠಿಣ ಪ್ರಸಂಗಗಳನ್ನು ಎದುರಿಸಿದ್ದೆವು. ಕೆಲವು ಖುಷಿಯ ಕ್ಷಣಗಳಿದ್ದರೆ ಅನೇಕ ದುಃಖದ ಸಂದರ್ಭಗಳೂ ಎದುರಾಗುತ್ತಿದ್ದವು. ಎಲ್ಲ ಸಂದರ್ಭಗಳಲ್ಲಿಯೂ ನಾವು ಅನಂತಕುಮಾರರಲ್ಲಿ ನಮ್ಮ ಉತ್ತರಗಳನ್ನು ಕಂಡುಕೊಳ್ಳುತ್ತಿದ್ದೆವು. ಇವತ್ತು ಅನಂತಕುಮಾರ್, ಅರುಣ್‌ಜೇಟ್ಲಿ, ಸುಷ್ಮಾ ಸ್ವರಾಜ್ ನಮ್ಮ ಮಧ್ಯೆ ಇಲ್ಲ. ಈ ಮೂವರೂ ನಮ್ಮ ಪಕ್ಷದ ಶಕ್ತಿಗಳಾಗಿದ್ದರು. ಶ್ರೀ ವೆಂಕಯ್ಯ ನಾಯ್ಡು ಉಪರಾಷ್ಟ್ರಪತಿಗಳಾಗಿ ಆಯ್ಕೆಯಾಗಿರುವುದರಿಂದ ಅವರೂ ರಾಜಕೀಯದಲ್ಲಿ ಸಕ್ರಿಯವಾಗಿಲ್ಲ. ನಾನು ಮತ್ತು ರಾಜನಾಥ ಸಿಂಗ್ ಒಂದೇ ಸಭೆಯಲ್ಲಿ ಕುಳಿತಾಗ ಸ್ವಾಭಾವಿಕವಾಗಿಯೇ ಹಿಂದಿನ ಅನೇಕ ನೆನಪುಗಳು ಮರುಕಳಿಸುತ್ತವೆ. ನಾವು ಜೊತೆಯಲ್ಲಿಯೇ ಇದ್ದರೂ, ಅನಂತಕುಮಾರರ ಆರೋಗ್ಯ ಸಮಸ್ಯೆ ನಮ್ಮ ಗಮನಕ್ಕೆ ಬಂದಿರಲಿಲ್ಲ, ಅವರನ್ನು ನಾವು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಅನಂತಕುಮಾರರು ಭಾರತದ ರಾಜಕಾರಣದಲ್ಲಿ ಇನ್ನೂ ಹದಿನೈದು, ಇಪ್ಪತ್ತು ವರ್ಷ ಕೆಲಸ ಮಾಡಬಲ್ಲ ವ್ಯಕ್ತಿತ್ವ ಮತ್ತು ನೇತೃತ್ವ ಶಕ್ತಿಯನ್ನು ಹೊಂದಿದ್ದರು. ಅವರನ್ನು ನಾವು ಉಳಿಸಿಕೊಳ್ಳಲಾಗಲಿಲ್ಲ ಎಂಬುದು ನಮಗೆ ಇಂದಿಗೂ ಬೇಸರದ ವಿಷಯವಾಗಿದೆ. ಆದರೆ ವಿಧಿಲಿಖಿತವನ್ನು ಬದಲಾಯಿಸಲು ಸಾಧ್ಯವಿಲ್ಲ. ಹುಟ್ಟಿದವರೆಲ್ಲ ಒಂದಲ್ಲ ಒಂದು ದಿನ ಸಾಯಲೇಬೇಕು. ಇದು ಸೃಷ್ಟಿಯ ನಿಯಮ. ಅನಂತಕುಮಾರ್ ತಮ್ಮ ಜೀವನದಲ್ಲಿ ಕಡಿಮೆ ಅವಧಿಯಲ್ಲಿಯೇ ಅದ್ಭುತವಾದ ಸಾಧನೆ ಮಾಡಿದ್ದಾರೆ. ಶಿವಾಜಿ ಮಹಾರಾಜರು ಮತ್ತು ಸ್ವಾಮಿ ವಿವೇಕಾನಂದ ಮುಂತಾದ ಮಹಾಪುರುಷರ ಆಯುಸ್ಸು ಕೂಡ ಹೆಚ್ಚಿಗೆ ಇರಲಿಲ್ಲ, ಆದರೂ ಇವತ್ತಿಗೂ ಕೂಡ ಅವರ ಕಾರ್ಯಗಳನ್ನು ಮತ್ತು ಚಿಂತನೆಗಳನ್ನು ನಾವು ಗೌರವಿಸುತ್ತೇವೆ. ಅದೇ ರೀತಿ, ಅನಂತಕುಮಾರರ ಆಯುಸ್ಸು ಕಡಿಮೆಯಿದ್ದರೂ ಅವರ ಕಾರ್ಯಗಳನ್ನು ನಾವು ಎಂದೆಂದಿಗೂ ನೆನೆಸಿಕೊಳ್ಳುತ್ತೇವೆ.

ಅನಂತಕುಮಾರರಂಥ ಕಾರ್ಯಕರ್ತರೇ ನಮ್ಮ ಪಕ್ಷದ ದೊಡ್ಡ ಆಸ್ತಿ. ಅವರು ನಮ್ಮ ಪಕ್ಷಕ್ಕೆ ಸ್ತಂಭದಂತೆ ಆಧಾರವಾಗಿದ್ದರು. ರಾಷ್ಟ್ರೀಯತೆಯ ಜೊತೆಗೆ ಒಳ್ಳೆಯ ಆಡಳಿತ ಹಾಗೂ ಅಭಿವೃದ್ಧಿಯೇ ನಮ್ಮ ಪಕ್ಷದ ಧ್ಯೇಯವಾಗಿದೆ. ಶ್ರೀ ದೀನದಯಾಳ್ ಉಪಾಧ್ಯಾಯರ ಆಶಯದಂತೆ ಸಮಾಜದ ಎಲ್ಲ ವ್ಯಕ್ತಿಗಳೂ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದೆ ಬರಬೇಕು. ಕೊನೆಯ ಸಾಲಿನ ಕೊನೆಯ ವ್ಯಕ್ತಿಗೂ ಎಲ್ಲ ಸೌಲಭ್ಯಗಳು ಸಿಕ್ಕಾಗ ನಮ್ಮ ಕಾರ್ಯ ಸಫಲವಾಗುತ್ತದೆ. ಈ ಆಶಯಕ್ಕನುಗುಣವಾಗಿ ಅನಂತಕುಮಾರರು ಕಾರ್ಯ ನಿರ್ವಹಿಸುತ್ತಿದ್ದರು. ಅವರ ದಾರಿಯಲ್ಲಿಯೇ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ತಮ್ಮ ಸಂಸ್ಥೆಯ ಮೂಲಕ ಸಾವಿರಾರು ಮಕ್ಕಳಿಗೆ ಊಟ ತಲುಪಿಸುತ್ತಿದ್ದಾರೆ. ಅವರ ಸಾಮಾಜಿಕ ಕಳಕಳಿ ಪ್ರಶಂಸನೀಯ. ಅನಂತಕುಮಾರ್ ಅವರು ಇವತ್ತು ನಮ್ಮ ಜೊತೆ ಇಲ್ಲ, ಆದರೆ ಅವರ ನೆನಪುಗಳು ನಮ್ಮ ಜೊತೆ ಇವೆ. ನಾನು ನನ್ನ ರಾಜಕೀಯ ಜೀವನದಲ್ಲಿ ಅನಂತಕುಮಾರರನ್ನು ಸದಾ ನೆನಪಿಸಿಕೊಳ್ಳುತ್ತೇನೆ. ಇಂದು ಅನಂತಕುಮಾರರು ದೈಹಿಕವಾಗಿ ನಮ್ಮೊಂದಿಗೆ ಇರದಿದ್ದರೂ ಅವರ ಆತ್ಮವು ನಮ್ಮನ್ನು ಸದಾ ಗಮನಿಸುತ್ತಿರುತ್ತದೆ ಎಂಬ ವಿಶ್ವಾಸ ನನಗಿದೆ. ★

# ಅದಮ್ಯ ಚೇತನದ ಅನಂತ ಸೇವಾ ಗಾಥೆ

ಡಾ. ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ



ಗ್ರಾಮ ಪಂಚಾಯತಿಯ ಸದಸ್ಯೆಯರಾಗಿ ಜನರಿಂದ ಆಯ್ಕೆಯಾಗಿ ಉತ್ತಮ ಸಾಧನೆಯನ್ನು ಮಹಿಳೆಯರು ಮಾಡಿದ್ದಾರೆ. ಜನರು ತಮ್ಮ ಮೇಲಿಟ್ಟಿರುವ ವಿಶ್ವಾಸವನ್ನು ಉಳಿಸಿಕೊಳ್ಳುವ ಹೊಣೆ ಅವರ ಮೇಲಿದೆ. ರಾಜಕೀಯ ವ್ಯವಸ್ಥೆಯ ಒಂದು ಮೆಟ್ಟಿಲನ್ನು ಏರಿರುವ ಮಹಿಳೆಯರು ತಮ್ಮ ಮುಂದಿನ ಗುರಿ ಏನೆಂಬುದನ್ನು ಈಗಲೇ ನಿರ್ಧರಿಸಿಕೊಳ್ಳಬೇಕು; ಅದಕ್ಕೆ ಪೂರಕವಾಗಿ ಕಾರ್ಯತಂತ್ರಗಳನ್ನು ನಿರೂಪಿಸಿಕೊಳ್ಳಬೇಕು. ಚುನಾವಣೆಗೆ ನಿಲ್ಲುವಾಗಲೇ ಓರ್ವ ಉತ್ತಮ ನಾಯಕಿಯಾಗಿ ಕೆಲಸ ಮಾಡಬೇಕೆಂಬ ಅವರ ಉದ್ದೇಶ ಸ್ಪಷ್ಟವಾಗಿದೆ. ಉತ್ತಮ ನಾಯಕಿಯ ಲಕ್ಷಣಗಳನ್ನು ಮೈಗೂಡಿಸಿಕೊಂಡು ಜನಹಿತದ ಕೆಲಸಗಳನ್ನು ಮಾಡಿದರೆ ಇದೇ ಮಾರ್ಗದಲ್ಲಿ ಮುಂದುವರೆದು ತಾಲೂಕು, ಜಿಲ್ಲಾ ಪಂಚಾಯತಿಗಳ ಸದಸ್ಯರಾಗಿ, ನಂತರ ವಿಧಾನ ಸಭೆಯ ಸದಸ್ಯರಾಗಿ ಕಾರ್ಯ ನಿರ್ವಹಿಸುವ ಅವಕಾಶವನ್ನೂ ಮತದಾರರು ನೀಡುತ್ತಾರೆ. ಜನಪ್ರತಿನಿಧಿಯಾಗಿ ಆಯ್ಕೆಯಾದ ನಂತರ, ಇರುವ ಅವಕಾಶಗಳನ್ನು ಬಳಸಿಕೊಂಡು ಉದ್ಯಮಿಯಾಗಿ ಬೆಳೆದು ಹಣಸಂಪಾದನೆ ಮಾಡುತ್ತೇನೆ ಎಂಬ ಭಾವನೆ ಒಳ್ಳೆಯದಲ್ಲ. ರಾಜಕೀಯದ ಕ್ಷೇತ್ರಕ್ಕೆ ಮಹಿಳೆಯರು ಸ್ವಯಿಚ್ಛೆಯಿಂದ ಕಾಲಿರಿಸಿದ್ದಾರೆ. ಅಲ್ಲೊಬ್ಬರು, ಇಲ್ಲೊಬ್ಬರು ಇತರರ ಬಲವಂತಕ್ಕೆ ಮಣಿದು ಚುನಾವಣೆಗೆ ನಿಂತಿರಬಹುದು. ಏನೇ ಆದರೂ, ಪ್ರತಿಯೊಬ್ಬರೂ ಕಲಿಯುವ ಎಲ್ಲ ಅವಕಾಶಗಳನ್ನೂ ಸಂಪೂರ್ಣವಾಗಿ ಬಳಸಿಕೊಳ್ಳಬೇಕು.ನಾವು ಸಣ್ಣದಾಗಿ ಪ್ರಾರಂಭಿಸಿದ ಅದಮ್ಯ ಚೇತನ ಸಂಸ್ಥೆ ಇಂದು ಅಗಾಧವಾಗಿ ಬೆಳೆದು ನಿಂತಿದೆ. ಅದಮ್ಯ ಚೇತನದ ಅಡುಗೆ ಮನೆಗೆ ಇದುವರೆಗೆ ಮೂವರು ರಾಷ್ಟ್ರಪತಿಗಳೂ ಸೇರಿದಂತೆ, ಹಲವಾರು ರಾಜಕೀಯ, ಧಾರ್ಮಿಕ ಮತ್ತು ಇತರ ನಾಯಕರು ಭೇಟಿ ನೀಡಿ ಮೆಚ್ಚುಗೆ ವ್ಯಕ್ತ ಪಡಿಸಿರಬೇಕಾದರೆ ಈ ಸಂಸ್ಥೆಯ ಕಾರ್ಯ, ವಿಶೇಷತೆಗಳೇ ಕಾರಣ. ಮಾನ್ಯ ಅನಂತಕುಮಾರರು ಬಡತನದಲ್ಲಿಯೇ ಬಾಲ್ಯವನ್ನು ಕಳೆದವರು. ಆದರೆ, ಬಡತನವು ಅವರ ಸಮಾಜಸೇವೆಯ ಹಂಬಲವನ್ನು ಕುಂಠಿತಗೊಳಿಸಲಿಲ್ಲ.

ನಾನು ಅವರನ್ನು ಮದುವೆಯಾಗುವಾಗ ಅವರಿಗೆ ಯಾವ ಅಧಿಕಾರವೂ ಇರಲಿಲ್ಲ. ಅವರ ಪಕ್ಷವೂ ಅಧಿಕಾರದಲ್ಲಿರಲಿಲ್ಲ. ಅವರಿಗೊಂದು ಉದ್ಯೋಗವೂ ಇರಲಿಲ್ಲ. ಆದರೆ ಅವರು ರಾಜ್ಯಮಟ್ಟದಲ್ಲಿ, ರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುತ್ತ ಉತ್ತಮ ನಾಯಕತ್ವದ ಗುಣಗಳನ್ನು ಪ್ರದರ್ಶಿಸುತ್ತಿದ್ದರು. ನಾವು ಮದುವೆಯಾಗಲು ನಿರ್ಧರಿಸಿದಾಗ, ತಮ್ಮ ಭಾವೀ ಅಳಿಯನಿಗೆ ಉದ್ಯೋಗವೇ ಇಲ್ಲವಲ್ಲ, ಇವರಿಗೆ ಮಗಳನ್ನು ಕೊಡುವುದು ಹೇಗೆ ಎಂದು ನಮ್ಮ ತಂದೆ ಆತಂಕಿತರಾಗಿದ್ದರು. ಅದಕ್ಕೆ ನಾನು “ನೀವು ನನಗೆ ಇಂಜನಿಯರಿಂಗ್ ಓದಿಸಿದ್ದೀರಿ, ನಾನು ಕೆಲಸಕ್ಕೆ ಸೇರಿ ಸಂಪಾದನೆ ಮಾಡಿ ಮನೆ ನಡೆಸುತ್ತೇನೆ. ಅವರು ಲಕ್ಷಾಂತರ ಮನೆಗಳನ್ನು ಉಳಿಸುವ ದೊಡ್ಡ ಕೆಲಸ ಮಾಡುತ್ತಿದ್ದಾರೆ. ಅದನ್ನು ಅವರು ಮುಂದುವರಿಸಿಕೊಂಡು ಹೋಗಲಿ” ಎಂದು ಹೇಳಿದ್ದೆ. ನಮ್ಮ ತಂದೆ ತಾಯಿ ಕೊನೆಗೂ ಒಪ್ಪಿಗೆ ನೀಡಿದ್ದರು. ನಾನು ಸರಕಾರಿ ಕೆಲಸಕ್ಕೆ ಸೇರಿದೆ. ಕೆಲಸವನ್ನು ನಿಷ್ಠೆಯಿಂದ ಮಾಡುತ್ತಲೇ ಯಜಮಾನರಿಗೂ ಅವರ ಕಾರ್ಯದಲ್ಲಿ ನೆರವಾಗುತ್ತಿದ್ದೆ. ಅವರಿಂದ ನನಗೆ ಯಾವುದೇ ಸಹಾಯ ದೊರೆಯುತ್ತಿಲ್ಲ, ಮಕ್ಕಳನ್ನು ಶಾಲೆಗೆ ಬಿಟ್ಟುಬರುವ ಕೆಲಸವನ್ನೂ ಅವರು ಮಾಡುತ್ತಿಲ್ಲ ಎಂದೇನೂ ನಾನು ಕೊರಗಲಿಲ್ಲ. ಮುಂದೆ ಅನಂತಕುಮಾರರು ಕೇಂದ್ರ ಸರಕಾರದಲ್ಲಿ ಮಂತ್ರಿಯಾದರು. ಆ ಸಮಯದಲ್ಲಿ ಕೆಲಸವನ್ನೂ ಮಾಡಿಕೊಂಡು ಮನೆಯನ್ನೂ ನಿಭಾಯಿಸುವುದು ನನಗೆ ಕಷ್ಟವಾಗಿ ಕಂಡಿತು. ಆದುದರಿಂದ ಕೆಲಸಕ್ಕೆ ರಾಜೀನಾಮೆ ನೀಡಿದೆ. ನಾನು ಒಂದು ದೊಡ್ಡ ಕೆಲಸದಲ್ಲಿಯೇ ಇದ್ದೆ. ಭಾರತದ ಹೆಮ್ಮೆಯ ಲಘು ಯುದ್ಧ ವಿಮಾನವಾದ ತೇಜಸ್ ನಿರ್ಮಾಣದಲ್ಲಿ ತೊಡಗಿಕೊಂಡಿದ್ದ ಸಂಸ್ಥೆಯ ಕಂಪ್ಯೂಟರ್ ವಿಭಾಗದಲ್ಲಿ ವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದೆ. ಅಲ್ಲಿ ನಾನು ಸಾಕಷ್ಟು ಅನುಭವಗಳನ್ನು ಗಳಿಸಿಕೊಂಡಿದ್ದೆ. ಕೆಲಸಕ್ಕೆ ರಾಜೀನಾಮೆ ನೀಡಿದ ನಂತರ ನನ್ನ ಈ ಎಲ್ಲ ಅನುಭವಗಳು ವ್ಯರ್ಥವಾಗುತ್ತವೆ ಎಂದು ಅನಂತಕುಮಾರರಿಗೆ ಅನ್ನಿಸಿತು. ಕಾಲೇಜು ದಿನಗಳಿಂದಲೇ ಕೆಲಸ ಮಾಡಿಕೊಂಡಿದ್ದ ನನಗೂ ಹಾಗೆಯೇ ಅನ್ನಿಸುತ್ತಿತ್ತು. ಆದುದರಿಂದ ನನ್ನ ಅನುಭವವನ್ನು ಅಲ್ಪ ಸ್ವಲ್ಪ ಸಮಾಜಸೇವೆಯಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಿದೆ. ಅನಂತಕುಮಾರರು ಆಗ ಮಂತ್ರಿಯಾಗಿದ್ದುದರಿಂದ ನನ್ನ ಮಾತಿಗೂ ಆಗ ಬೆಲೆಯಿತ್ತು. ನಮ್ಮ ಕೆಲಸಗಳಿಗೆ ಸಹಾಯ ಮಾಡಲು ಜನರೂ ಮುಂದೆ ಬರುತ್ತಿದ್ದರು. ಹೀಗಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡು ಅದರ ಮೂಲಕ ಸಮಾಜ ಸೇವೆಯನ್ನು ಮಾಡೋಣ ಎಂದು “ಅದಮ್ಯ ಚೇತನ” ಸಂಸ್ಥೆಯನ್ನು ಪ್ರಾರಂಭಿಸಿದೆವು. ಪ್ರಾರಂಭದಲ್ಲಿ ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಶಾಲೆಗಳಿಗೆ ಹೋಗಿ ಮಕ್ಕಳಿಗೆ ಪಾಠ ಹೇಳಿಕೊಡುವುದು, ಹೊಲಿಗೆ ತರಗತಿ ನಡೆಸುವುದು, ಕಂಪ್ಯೂಟರ್ ತರಗತಿ ನಡೆಸುವುದು ಮಾಡುತ್ತಿದ್ದೆವು. ಆಗ ನಾವು ಜನರಿಂದ ಎದುರಿಸುತ್ತಿದ್ದದ್ದು ಒಂದೇ ಪ್ರಶ್ನೆ, “ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಏಕೆ ಬೇಕು?” ಹೆಣ್ಣು ಮಕ್ಕಳೂ ಉನ್ನತ ವಿದ್ಯಾಭ್ಯಾಸ ಮಾಡಿ ಕೆಲಸಕ್ಕೆ ಸೇರಬಹುದು ಎಂದು ನಾವು ಉತ್ತರಿಸುತ್ತಿದ್ದೆವು.

ಹೆಣ್ಣು ಮಕ್ಕಳು ಕಂಪ್ಯೂಟರನ್ನು ಅನಾಯಾಸವಾಗಿ ಕಲಿಯ ಬಹುದು, ಇದಕ್ಕೇನೂ ಪರೀಕ್ಷೆಯಿರುವುದಿಲ್ಲ ಎಂದು ಅವರ ಮನವೊಲಿಸಿ ಕಂಪ್ಯೂಟರ್ ತರಗತಿಗಳನ್ನು ನಡೆಸತೊಡಗಿದೆವು. ಕೆಲವು ವರ್ಷ ಹೀಗೆಯೇ ನಡೆಯಿತು. ಶಾಲೆಗಳಲ್ಲಿ ಯಾವುದಾದರೂ ದೊಡ್ಡ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದು ನಾವು ಯೋಚಿಸುತ್ತಿದ್ದೆವು. ಅಂತಹ ಸಂದರ್ಭದಲ್ಲಿ ಶಾಲೆಗಳಲ್ಲಿ ಬಿಸಿಯೂಟದ ಕಾರ್ಯಕ್ರಮವನ್ನು ವಾಜಪೇಯಿ ಸರಕಾರವು ಪ್ರಾರಂಭಿಸಿತು. ಆಗ ನಾವು ಸಹಾಯ ಮಾಡುತ್ತಿದ್ದ ಶಾಲೆಗಳ ಶಿಕ್ಷಕರು ನೀವು ನಡೆಸುತ್ತಿರುವ ಆಟ-ಪಾಠ ಕಾರ್ಯಕ್ರಮದ ಬದಲು ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸಲು ಸಾಧ್ಯವೇ ಎಂದು ಕೇಳಿದರು. ನಾನು ಈ ಬಗ್ಗೆ ಚಿಂತನೆ ಮಾಡಿ ಅಬ್ಬಬ್ಬಾ ಎಂದರೆ 1000 ಮಕ್ಕಳಿಗೆ ಊಟವನ್ನು ಒದಗಿಸಬಹುದು ಎಂದು ಯೋಚಿಸಿ ಅನಂತಕುಮಾರರ ಹತ್ತಿರ ಈ ವಿಷಯ ಪ್ರಸ್ತಾಪ ಮಾಡಿದೆ. ಆಗ ಅವರು “ನಮ್ಮ ಕ್ಷೇತ್ರದಲ್ಲಿ 15000 ಮಕ್ಕಳಿದ್ದಾರೆ, ಕೊಡುವುದಾದರೆ ಎಲ್ಲ 15000 ವಿದ್ಯಾರ್ಥಿಗಳಿಗೂ ಬಿಸಿಯೂಟ ಒದಗಿಸಿ” ಎಂದು ಖಡಾಖಂಡಿತವಾಗಿ ಹೇಳಿದರು. ನಾನು ಅವರ ಸವಾಲನ್ನು ಧೈರ್ಯದಿಂದಲೇ ಸ್ವೀಕರಿಸಿದೆ. ಹೀಗೆ ಮೊದಲಿನ ದಿನ 10000 ದಿಂದ ಪ್ರಾರಂಭವಾದ ನಮ್ಮ ಸಂಖ್ಯೆ ಇಂದು ದಿನಂಪ್ರತಿ ಎರಡು ಲಕ್ಷವನ್ನು ದಾಟಿದೆ. ಸವಾಲನ್ನು ಸ್ವೀಕರಿಸಿದ್ದಾಯಿತು, ಅದರೆ ಮದುವೆಗೆ ಮೊದಲು ನನಗೆ ಅಡುಗೆಯ ಗಂಧಗಾಳಿ ಗೊತ್ತಿರಲಿಲ್ಲ. ನಂತರ ನಾನು ಕಲಿತಿದ್ದೇನಾದರೂ ಇದ್ದರೆ ಅದು ನನ್ನ ಅತ್ತೆಯವರ ಮೂಲಕ. ಒಬ್ಬ ಅಡುಗೆಯವರನ್ನಿರಿಸಿಕೊಂಡು ಅಡುಗೆಮನೆಯನ್ನು ಪ್ರಾರಂಭಿಸಿದೆವು. ಮೊದಲ ಮೂರು ವರ್ಷಗಳ ತನಕ ನಮಗೇನೂ ತಿಳಿಯುತ್ತಿರಲಿಲ್ಲ. ನಮ್ಮ ಅಡುಗೆಯವರೋ ನಿರಕ್ಷರಕುಕ್ಷಿಗಳು. ಅಡುಗೆಯ ವಿವರಗಳನ್ನು ಬರೆದಿಡಲು ಅವರಿಗೆ ತಿಳಿಯುತ್ತಿರಲಿಲ್ಲ. ದಿನಕ್ಕೆ 52000 ಜನರಿಗೆ ಅಡುಗೆ ಮಾಡುತ್ತಿದ್ದ ಅವರಿಗೆ ಬರೆಯಲು ಬರುತ್ತಿದ್ದಿಲ್ಲವೆಂದರೆ ಯಶಸ್ಸಿಗೆ, ಕಾರ್ಯ ಕುಶಲತೆಗೆ ಓದು ಬರಹ ಮುಖ್ಯವಲ್ಲ ಎಂಬುದು ಅರಿವಿಗೆ ಬರುತ್ತದೆ.

ಪುಟ 5 ರಲ್ಲಿ ಮುಂದುವರೆದಿದೆ





# ಚುನಾಯಿತ ಸದಸ್ಯರಿಗೆ ಪ್ರಶಿಕ್ಷಣ

**ಪ್ರೊ. ಪಿ. ವಿ. ಕೃಷ್ಣ ಭಟ್**
ಅಧ್ಯಕ್ಷರು, ಅನಂತಕುಮಾರ್ ಪ್ರತಿಷ್ಠಾನ

ಭಾರತದ ಮಹಿಳೆಯರು ಸಮಾಜ ಜೀವನದಲ್ಲಿ ವಹಿಸಬೇಕಾದ ಪಾತ್ರವನ್ನು ಕುರಿತು ಸ್ವಾಮಿ ವಿವೇಕಾನಂದರು ಅನೇಕ ವರ್ಷಗಳ ಹಿಂದೆಯೇ ಬಹು ಗಹನವಾಗಿ ಚಿಂತನೆ ಮಾಡಿದ್ದರು. ಅಮೆರಿಕಾದಲ್ಲಿ ಒಮ್ಮೆ ಅವರು ತಮ್ಮ ಆತ್ಮೀಯರೊಡನೆ ಮಾತನಾಡುತ್ತಿದ್ದಾಗ "I saw my greatest attraction in America" ಎಂದಿದ್ದರಂತೆ. ಅಲ್ಲಿಯ ಕೆಲವು ಮಹಿಳಾ ಸ್ನೇಹಿತರು ತಮಾಷೆಗಾಗಿ "Who is that fortunate Lady, Masterji?" ಎಂದು ಪ್ರಶ್ನೆ ಮಾಡಿದರಂತೆ. ವಿವೇಕಾನಂದರ ಉದ್ಗಾರ ಒಬ್ಬ ವ್ಯಕ್ತಿಯ ಕುರಿತಾಗಿರಲಿಲ್ಲ. ಬದಲಾಗಿ, "ಅಮೆರಿಕಾದ ಸಮಾಜ ಜೀವನದಲ್ಲಿ ಮಹಿಳೆಯರು ವಹಿಸುತ್ತಿರುವ ಪಾತ್ರವನ್ನು, ನೇತೃತ್ವವನ್ನು ನೋಡಿ ನನಗೆ ಬಹಳ ಸಂತೋಷವಾಯಿತು, ಭಾರತದಲ್ಲಿ ಕೂಡ ಮಹಿಳೆಯರು ಸಮಾಜ ಜೀವನದಲ್ಲಿ ಪ್ರಮುಖವಾದ ಪ್ರಭಾವೀ ನೇತೃತ್ವ ವಹಿಸಬೇಕು" ಎಂದು ವಿವೇಕಾನಂದರು ತಮ್ಮ ಮನೋಗತವನ್ನು ವ್ಯಕ್ತಪಡಿಸಿದ್ದರು. ಭಾರತೀಯ ವಿಚಾರ ಮತ್ತು ಭಾರತೀಯ ಚಿಂತನೆಗಳು ಇವತ್ತು ಇಡೀ ಜಗತ್ತಿನಲ್ಲಿ ಎಲ್ಲರ ಗಮನ ಸೆಳೆಯುತ್ತಿವೆ. ಜಗತ್ತು ಒಂದು ಸಂದಿಗ್ಧ ಸ್ಥಿತಿಯ ಮೂಲಕ ಸಾಗುತ್ತಿದೆ. ಅನೇಕ ರೀತಿಯ ಸಾಮಾಜಿಕ ಮತ್ತು ಆರ್ಥಿಕ ಹಾಗೂ ಪರಿಸರ ಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳಿಂದ ಹೊರ ಬರಲು ಅನೇಕ ವಿದ್ವಾಂಸರು, ಚಿಂತಕರು ಭಾರತೀಯ ನಾಯಕತ್ವದ ಕಡೆಗೆ ನೋಡುತ್ತಿದ್ದಾರೆ. ಇಂದು ಭಾರತದ ವೈಚಾರಿಕತೆ ಇಡೀ ಜಗತ್ತನ್ನು ಆಕರ್ಷಿಸುತ್ತಿದೆ.

ಪಂಚಾಯತಿ ಮಟ್ಟದಲ್ಲಿ ಚುನಾಯಿತರಾಗಿರುವ ಪ್ರತಿನಿಧಿಗಳಿಗೆ ಅವರು ಮಾಡಬೇಕಾದ ಕೆಲಸಗಳು ಮತ್ತು ಅವರ ಅಧಿಕಾರಗಳ ಬಗ್ಗೆ ಹಾಗೂ ಪಂಚಾಯತಿಗಳ ಕೆಲಸ ಹೇಗೆ ನಡೆಯಬೇಕೆನ್ನುವ ಬಗ್ಗೆ ತಿಳಿಯಲು ಪ್ರಶಿಕ್ಷಣ ಅವಶ್ಯವಾಗಿದೆ. ದುರದೃಷ್ಟವಶಾತ್, ನಮ್ಮ ದೇಶದ ಇಂದಿನ ವಾತಾವರಣದಲ್ಲಿ ಪ್ರಶಿಕ್ಷಣ ಅಗತ್ಯವಿಲ್ಲದಂತಾಗಿರುವ ಒಂದೇ ಒಂದು ಕ್ಷೇತ್ರವೆಂದರೆ ಅದು ರಾಜಕೀಯ ಎಂದು ಹೇಳಬಹುದು. ಒಂದಿಷ್ಟು ಹಣಬಲ, ತೋಳುಬಲ, ಜನಬಲ ಇದ್ದು ಗುಂಪು ಕಟ್ಟುವ ಸಾಮರ್ಥ್ಯ ಇದ್ದರೆ ಅವನು ಚುನಾವಣೆಯಲ್ಲಿ ಗೆದ್ದು ನಾಯಕನಾಗಬಹುದು, ಮಂತ್ರಿಯಾಗಬಹುದು, ಅವನು ಯಾವುದೇ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಮುಖ ಹುದ್ದೆಯನ್ನು ನಿರ್ವಹಿಸಬಹುದು. ಈ ರೀತಿಯ ವಾತಾವರಣ ಯಾವುದೇ ದೇಶಕ್ಕೆ ಅಥವಾ ಸಮಾಜಕ್ಕೆ ಒಳ್ಳೆಯ ಸಂಗತಿಯಲ್ಲ. ಜನ ಪ್ರತಿನಿಧಿಗಳು ಜನತೆಯ ನಾಯಕರು, ಜನತೆಗೆ ಮಾರ್ಗದರ್ಶನ ಮಾಡಬೇಕಾದವರು, ಜನರಿಗೆ ಮಾದರಿಯಾಗಬೇಕಾದವರು. ಇಂಥವರಿಗೆ, ಪ್ರಶಿಕ್ಷಣ ಮತ್ತು ಸಂಸ್ಕಾರ ಎರಡೂ ಮುಖ್ಯ. ಆದರೆ ದುರದೃಷ್ಟವಶಾತ್ ನಮ್ಮ ದೇಶದಲ್ಲಿ ಈ ರೀತಿಯ ಒಂದು ಪ್ರಶಿಕ್ಷಣ ವ್ಯವಸ್ಥೆ ಇದುವರೆಗೂ ರೂಪುಗೊಂಡಿಲ್ಲ.

ಸರ್ಕಾರವು ಎಲ್ಲಾ ಪಂಚಾಯತಿಗಳಲ್ಲಿ ಶೇ.50 ರಷ್ಟು ಮಹಿಳಾ ಪ್ರತಿನಿಧಿಗಳು ಇರಬೇಕೆಂದು ತೀರ್ಮಾನ ಮಾಡಿದೆ. ಕೇವಲ ಪಂಚಾಯತಿ ಮಾತ್ರವಲ್ಲದೇ ವಿಧಾನಸಭೆ, ಸಂಸತ್ತುಗಳಲ್ಲಿಯೂ ಮಹಿಳೆಯರು ಎಲ್ಲಾ ಹಂತಗಳಲ್ಲಿ ಇರಬೇಕು. ನಮ್ಮ ದೇಶದಲ್ಲಿ ಒಂದು ಕಾಲದಲ್ಲಿ ಮಹಿಳೆಯರು ಪ್ರಮುಖವಾದ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ರಾಜಕೀಯ ಕ್ಷೇತ್ರದಲ್ಲಿ ಅನೇಕ ಮಹಿಳಾ ಮುತ್ಸದ್ದಿಗಳಿದ್ದರು. ಮಹಿಳೆಯರು ಶಸ್ತ್ರವನ್ನು ಹಿಡಿದು ಹೋರಾಟವನ್ನೂ ಮಾಡಿದ್ದಾರೆ, ಇನ್ನೊಂದು ಕಡೆಗೆ ಸಮರ್ಥವಾಗಿ ಆಡಳಿತ ನಿರ್ವಹಿಸಿದಂತಹ ಉದಾಹರಣೆಗಳೂ ಸಿಗುತ್ತವೆ. ಕಾಲಕ್ರಮದಲ್ಲಿ, ಇತಿಹಾಸದ ಬೇರೆ ಬೇರೆ ಕಾಲಘಟ್ಟಗಳಲ್ಲಿ ಸಮಾಜದಲ್ಲಿ ಮಹಿಳೆಯರ ಪಾತ್ರಕ್ಕೆ ಆತಂಕ ಉಂಟಾಯಿತು. ವಿಶೇಷವಾಗಿ ಮುಸ್ಲಿಂ ಆಕ್ರಮಣಗಳ ಕಾಲದಲ್ಲಿ ಭಯಾನಕ ಪರಿಸ್ಥಿತಿ ನಿರ್ಮಾಣವಾಗಿ ಮಹಿಳೆಯರ ಸ್ವಾತಂತ್ರ್ಯಕ್ಕೆ ಅಡಚಣೆ ಉಂಟಾಯಿತು. ಮಹಿಳೆಯರು ತಮ್ಮ ಕರ್ತವ್ಯ ನಿರ್ವಹಿಸಲಾಗದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಆದರೂ, ತಂತಮ್ಮ ಮನೆಗಳಿಗೆ ಸೀಮಿತವಾದ ಚೌಕಟ್ಟಿನಲ್ಲಿಯೇ ಬಹಳ ಉದಾತ್ತವಾದ ಕೆಲಸಗಳನ್ನು ಮಹಿಳೆಯರು ನಿರ್ವಹಿಸಿದ್ದಾರೆ. ಶಿವಾಜಿಗೆ ಪ್ರೇರಣೆ ಮತ್ತು ಮಾರ್ಗದರ್ಶನ ನೀಡಿದ ಜೀಜಾಬಾಯಿ ಮತ್ತು ಅಹಲ್ಯಾಬಾಯಿ (ಹೋಳ್ಕರ್)ರವರಂತೆ ಆಡಳಿತ ಕೌಶಲ್ಯವನ್ನು ಹೊಂದಿದ್ದ ಅನೇಕ ಮಹಿಳೆಯರು ಸಮಾಜ ಜೀವನದ ಮೇಲೆ ಪ್ರಭಾವ ಬೀರಿದ್ದಾರೆ. ಆದರೆ ಈ ರೀತಿಯ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದರೆ ಅವರಿಗೆ ಅಗತ್ಯವಾದ ಪ್ರಶಿಕ್ಷಣ ಬೇಕು. ಕಳೆದ ಹಲವಾರು ವರ್ಷಗಳಲ್ಲಿ ಮಹಿಳೆಯರಿಗೆ ಸಾರ್ವಜನಿಕ ಜೀವನದಲ್ಲಿ ಯಾವ ಅಧಿಕಾರವೂ ಇದ್ದಿರಲಿಲ್ಲ. ಹೀಗಾಗಿ, ಆಡಳಿತದಲ್ಲಿ ತಾವು ವಹಿಸಬೇಕಾಗಿರುವ ಪಾತ್ರದ ಬಗ್ಗೆ, ಅವರ ಕರ್ತವ್ಯಗಳ ಬಗ್ಗೆ ಯಾವುದೇ ಪ್ರಶಿಕ್ಷಣ ವ್ಯವಸ್ಥೆ ಸಮಾಜದಲ್ಲಿ ಇರಲಿಲ್ಲ.

ಈ ಅವಶ್ಯಕತೆಯನ್ನು ಮನಗಂಡು ಅನಂತಕುಮಾರ್ ಪ್ರತಿಷ್ಠಾನವು ನೇತೃತ್ವ ವಿಕಸನ ಕಾರ್ಯಕ್ರಮವನ್ನು ಆಯೋಜಿಸಿದೆ. ಹಾಗೆ ನೋಡಿದರೆ, ಸಮಾಜದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಮುಂಚೂಣಿಗೆ ಬರುವ ಪುರುಷರಿಗೂ ಪ್ರಶಿಕ್ಷಣ ಕೊಡುವ ವ್ಯವಸ್ಥೆ ನಮ್ಮಲ್ಲಿಲ್ಲ. ಒಬ್ಬ ಇಂಜಿನಿಯರ್ ಆಗಲು, ಒಬ್ಬ ಲಾಯರ್ ಆಗಲು ಪದವಿ ಬೇಕಾಗುತ್ತದೆ. ಇನ್ನಾವುದೇ ಆಡಳಿತ ಹುದ್ದೆಗಳನ್ನು ನಿರ್ವಹಿಸಲು ಒಂದು ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕಾಗುತ್ತದೆ. ಆದರೆ ಒಬ್ಬ ರಾಜಕಾರಣಿಯಾಗಬೇಕಾದರೆ ಅವನಿಗೆ ಯಾವ ಶಿಕ್ಷಣದ ಅವಶ್ಯಕತೆಯೂ ಇಲ್ಲ ಎನ್ನುವಂತಹ ಈ ರೀತಿಯ ವಾತಾವರಣ ಬದಲಾಗಬೇಕು, ಪ್ರಶಿಕ್ಷಣದ ಒಂದು ವ್ಯವಸ್ಥೆಯಾಗಬೇಕು ಎನ್ನುವ ಅನಂತಕುಮಾರರ ಅಪೇಕ್ಷೆಯಂತೆ ಈ ಕಾರ್ಯಕ್ರಮ ಪ್ರಾರಂಭವಾಗಿದೆ.

ಈ ಶಿಬಿರದಲ್ಲಿ ಭಾಗವಹಿಸುತ್ತಿರುವ ಅಭ್ಯರ್ಥಿಗಳಿಗೆ ತಮ್ಮ ಕ್ಷೇತ್ರದಲ್ಲಿ ನಾಯಕತ್ವವನ್ನು ವಹಿಸಿಕೊಳ್ಳಲು ಬೇಕಾದ ಕೌಶಲ್ಯಗಳನ್ನು ತಿಳಿಸಿಕೊಡಲಾಗುತ್ತದೆ. ಕ್ಷೇತ್ರದಲ್ಲಿ ಚುನಾಯಿತ ಸದಸ್ಯರ ಜವಾಬ್ದಾರಿಗಳು, ಸಂಪನ್ಮೂಲಗಳನ್ನು ಕ್ರೋಡೀಕರಿಸುವ ಬಗೆ, ಅಧಿಕಾರದ ಇತಿಮಿತಿಗಳು ಮುಂತಾದ ಅನೇಕ ವಿಷಯಗಳ ಬಗ್ಗೆ ಇಲ್ಲಿ ಮಾಹಿತಿ ನೀಡಲಾಗುವುದು. ಅನಂತಕುಮಾರ್ ಪ್ರತಿಷ್ಠಾನವು ಪ್ರಾರಂಭಿಸಿರುವ ಈ ಪ್ರಶಿಕ್ಷಣವು ಪಕ್ಷಾತೀತವಾಗಿರುತ್ತದೆ. ಭಾರತದ ಶಾಸನ ಸಭೆಗಳಲ್ಲಿ ಸದಸ್ಯರ ವರ್ತನೆಗಳನ್ನು ಗಮನಿಸಿದರೆ ನಾಚಿಕೆಯಾಗುತ್ತದೆ. ಭಾರತಕ್ಕೆ ಪ್ರಾಚೀನವಾದ ಪರಂಪರೆಯಿದೆ. ಪ್ರಾಚೀನ ಕಾಲದ ಆಡಳಿತ ವ್ಯವಸ್ಥೆಯನ್ನು ಗ್ರಾಮ ಸ್ವರಾಜ್ಯ ಎಂದು ಕರೆಯುತ್ತಿದ್ದರು. ಪಶ್ಚಿಮದ ದೇಶಗಳಲ್ಲಿ ಈ ಗಣರಾಜ್ಯದ ಕಲ್ಪನೆ ಬರುವುದಕ್ಕೆ ಸಾವಿರಾರು ವರ್ಷಗಳ ಮೊದಲೇ ಭಾರತದ ಗ್ರಾಮಗಳಲ್ಲಿ ಗಣರಾಜ್ಯದ ವ್ಯವಸ್ಥೆ ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡುತ್ತಿತ್ತು. ಭಗವಾನ್ ಬುದ್ಧನ ಕಾಲದಲ್ಲಿಯೂ ಕೂಡ ವೈಶಾಲಿಯ ಗಣರಾಜ್ಯ, ಲಿಚ್ಛವಿಯ ಗಣರಾಜ್ಯ ಇತ್ಯಾದಿ ಹೆಸರುಗಳನ್ನು ನಾವು ಕೇಳುತ್ತೇವೆ. ಈ ಭವ್ಯ ಪರಂಪರೆಯನ್ನು ಮುಂದುವರೆಸಿಕೊಂಡು ಬರಲು, ಪಂಚಾಯತಿ ವ್ಯವಸ್ಥೆ ಸಫಲವಾಗಲು ಸರಿಯಾದ ತಿಳುವಳಿಕೆ, ಶಿಕ್ಷಣದ ಅಗತ್ಯವಿದೆ ಎನ್ನುವುದನ್ನು ಮನಗಂಡು ಪ್ರಾರಂಭವಾಗಿರುವ ಈ ಕಾರ್ಯಕ್ರಮ ನಿರಂತರವಾಗಿ ನಡೆಯಲೆಂದು ಆಶಿಸುತ್ತೇನೆ.

(ಅನಂತಕುಮಾರ್ ಪ್ರತಿಷ್ಠಾನವು ಪಂಚಾಯತಿ ಸದಸ್ಯೆಯರಿಗಾಗಿ ಡಿಸೆಂಬರ್ 2021ರಲ್ಲಿ ಜಿಗಣಿಯಲ್ಲಿ ಆಯೋಜಿಸಿದ್ದ ನಾಯಕತ್ವ ವಿಕಸನ ತರಬೇತಿಯಲ್ಲಿ ಮಾಡಿದ ಆಶಯ ಭಾಷಣದ ಸಂಗ್ರಹ) ★

**ಅನಂತಪಥ**

Editor: **Gopal T.S** | Assistance: **K. Janardhana Thunga** | Layout: **Ananthakumar Pratishthana**
**Assistance: Sanjay R / Trivikram Joshi**
Inputs: **Poornaprajna | Sreelakshmi Vishwanath | Chaya Bapat | Suvasini Narayan | Srikanth K**
Photographs: **Ananthakumar Pratishthana | Adamya Chethana | Gopal TS | Kengeri Chakrapani | Internet Sources**
Printed at: **Rashtrothana Mudranalaya, Chamrajpet, Bengaluru**
Published by: **Dr. Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415



ಪುಟ 3 ರಿಂದ

# ಅದಮ್ಯ ಚೇತನದ ಅನಂತ ಸೇವಾ ಗಾಥೆ

ಆದುದರಿಂದ ಓದು ಬರಹ ಕಲಿತು ಉದ್ಯೋಗ ಗಳಿಸುವುದೇ ಜೀವನದ ಗುರಿ ಎಂದು ಯಾರೂ ಭಾವಿಸಬೇಕಾಗಿಲ್ಲ. ನಾವು ಮಾಡುವ ಅಡುಗೆಯನ್ನೇ ಬೇರೆಯವರೂ ಮಾಡುತ್ತಾರೆ. ಹೋಟೆಲುಗಳಲ್ಲಿ ದೊರೆಯುವ ಬಿಸಿಬೇಳೆ ಭಾತು ಮತ್ತು ನಮ್ಮಲ್ಲಿ ತಯಾರಾಗುವ ಬಿಸಿಬೇಳೆ ಭಾತು ಒಂದೇ ರೀತಿಯದಾದರೆ ಇದರಲ್ಲಿ ನಮ್ಮ ವಿಶೇಷತೆಯೇನು ಬಂತು ಎಂದು ನಾವು ಯೋಚಿಸುತ್ತಿದ್ದೆವು. ಅದೇ ಸಮಯದಲ್ಲಿ ಬೆಂಗಳೂರಿನಲ್ಲಿ ಕಸ ವಿಲೇವಾರಿಯ ಸಮಸ್ಯೆ ಭೂತಾಕಾರವಾಗಿ ಬೆಳೆದಿತ್ತು. ಈ ಬಗ್ಗೆಯೂ ನಾವು ತಲೆ ಕೆಡಿಸಿಕೊಂಡೆವು. ಕಸದ ಬಗ್ಗೆ ಚಿಂತಿಸತೊಡಗಿದಾಗ ಕಸ ಎಲ್ಲಿಂದ ಉತ್ಪತ್ತಿಯಾಗುತ್ತದೆ ಎಂಬುದನ್ನು ಗಮನಿಸಿದೆವು. ಬೆಂಗಳೂರಿನಲ್ಲಿ ಅತಿ ಹೆಚ್ಚು ಕಸವು ಅಡುಗೆ ಮನೆಗಳಿಂದ ಹೊರಬೀಳುತ್ತಿವೆ. ಪ್ಲಾಸ್ಟಿಕ್ ಕಸವೂ ಕೂಡ ಅಡುಗೆ ಮನೆಯಿಂದಲೇ ಹೊರಬೀಳುತ್ತದೆ. ಹೀಗಾಗಿ, ಕನಿಷ್ಠ ಪಕ್ಷ ನಮ್ಮ ಅಡುಗೆ ಮನೆಯಿಂದ ಯಾವುದೇ ಕಸ ಹೊರಗೆ ಬೀಳಬಾರದಂತೆ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದೆವು. ಬೆಂಗಳೂರಿನಲ್ಲಿ ಅಂದು ದಿನಂಪ್ರತಿ 4000 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿತ್ತು. ಇವೆಲ್ಲ ನಗರದ ಸುತ್ತ ಮುತ್ತ ಇರುವ ಹಳ್ಳಿಗಳಿಗೆ ರವಾನೆಯಾಗಿ ಆ ಹಳ್ಳಿಗಳಲ್ಲಿ ಪರಿಸರ ಸಮಸ್ಯೆಯನ್ನು ಸೃಷ್ಟಿಸಿತ್ತು. ಬೆಂಗಳೂರಿನ ಕಸದ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಹುಡುಕಲು ಲೋಕಸಭಾ ಸದಸ್ಯರಾಗಿದ್ದ ಅನಂತಕುಮಾರರು ತಲೆ ಕೆಡಿಸಿಕೊಂಡಿದ್ದರು. ಹಸಿಕಸ ಮತ್ತು ಒಣಕಸಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಒಣಕಸದಿಂದ ಪ್ಲಾಸ್ಟಿಕ್ ಕಸವನ್ನು ಪ್ರತ್ಯೇಕಿಸಿ ಬ್ರಿಕೆಟ್ ತಯಾರಿಸಲು ಬಿಬಿಎಂಪಿ ಪ್ರಾರಂಭಿಸಿತು. ನಾವು ಅಂತಹ ಬ್ರಿಕೆಟ್ಟುಗಳನ್ನು ಖರೀದಿಸಿ ನಮ್ಮ ಅಡುಗೆ ಮನೆಯಲ್ಲಿ ಬಳಸಲಾರಂಭಿಸಿದೆವು. ತಿನ್ನುವ ಅನ್ನವನ್ನು ಚೆಲ್ಲಬಾರದು. ಹೀಗೆ ಚೆಲ್ಲಿದ ಅನ್ನವು ಪ್ಲಾಸ್ಟಿಕ್, ಗಾಜಿನ ಚೂರು, ಮಕ್ಕಳು ಬಳಸುವ ಡಯಪರ್ ಮುಂತಾದ ತ್ಯಾಜ್ಯಗಳ ಜೊತೆಗೆ ಕಸದ ತೊಟ್ಟಿಯನ್ನು ಸೇರುತ್ತದೆ. ಇದನ್ನು ಹಸುವೋ ನಾಯಿಯೋ ತಿಂದು ತೊಂದರೆಗೆ ಸಿಕ್ಕಿಬೀಳುತ್ತದೆ.

ಊಟಮಾಡುವಾಗ ಒಂದು ಕರಿಬೇವಿನ ಕಡ್ಡಿಯನ್ನು ಎಸೆಯುವಾಗಲೂ ಈ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.ನಮ್ಮ ಅಡುಗೆ ಮನೆಯಲ್ಲಿ ಮೊದಲು ನಾವು ಅಡುಗೆ ಅನಿಲವನ್ನು ಬಳಸುತ್ತಿದ್ದೆವು. ಇದೂ ಕೂಡ ನವೀಕರಿಸಲಾಗದ ಇಂಧನ. ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ, ಪಾಲಿಯೆಸ್ಟರ್, ಪ್ಲಾಸ್ಟಿಕ್ ಎಲ್ಲವಕ್ಕೂ ಮೂಲ ಒಂದೇ, ಅದು ನೆಲದಲ್ಲಿ 3000 ಮೀಟರ್ ಆಳದಲ್ಲಿ ದೊರೆಯುವ ಕಚ್ಚಾ ತೈಲ. ನಮ್ಮ ಎಲ್ಲ ಪರಿಸರ ಸಮಸ್ಯೆಗಳಿಗೂ ಇದೇ ಮುಖ್ಯ ಕಾರಣ. ಹೀಗಾಗಿ ಕಚ್ಚಾ ತೈಲದ ಬದಲಿಗೆ ಪರ್ಯಾಯ ಇಂಧನಗಳನ್ನು ಅನ್ವೇಷಣೆ ಮಾಡಬೇಕು. ವಿದ್ಯುತ್ ಶಕ್ತಿಯ ಉತ್ಪಾದನೆಗೂ ಮಿತಿಯಿದೆ. ಉರುವಲನ್ನು ಬಳಸಿದರೆ ಕಾಡು ನಾಶವಾಗುತ್ತದೆ. ಆದರೆ, ಸೂರ್ಯನ ಬಿಸಿಲಿಗೆ ಮಿತಿಯಿಲ್ಲ. ಸೌರ ವಿದ್ಯುತ್ತಿನ ಬಳಕೆಯ ಕಡೆಗೆ ನಾವು ಗಮನ ಹರಿಸಬೇಕು. ಇದನ್ನು ಗಮನಿಸಿ ನಮ್ಮ ಅಡುಗೆ ಮನೆಯ ಕಸವನ್ನೇ ಬ್ರಿಕೆಟ್ಟುಗಳನ್ನಾಗಿ ಮಾಡಿ ಇಂಧನವಾಗಿ ಬಳಸಲಾರಂಭಿಸಿದೆವು. ಅದು ಸಾಲದಿದ್ದಾಗ ಬಿಬಿಎಂಪಿಯಿಂದ ಕೊಂಡು ತಂದೆವು. ನಮ್ಮ ಅಡುಗೆಗೆ ಬಳಸಿದ ತೆಂಗಿನ ಚಿಪ್ಪುಗಳನ್ನು ಮಸಾಲೆ ಹುರಿಯುವ ಒಲೆಗೆ ಬಳಸಿಕೊಂಡೆವು. ಇಂದು ನಾವು ವಿದ್ಯುಚ್ಛಕ್ತಿಯ ಬದಲು ಸೌರಶಕ್ತಿಯನ್ನೇ ಸಂಪೂರ್ಣವಾಗಿ ಬಳಸುತ್ತಿದ್ದೇವೆ. ನಾವು ಪ್ರತಿದಿನ ಸುಮಾರು ಎರಡು ಟ್ಯಾಂಕರುಗಳಷ್ಟು ನೀರನ್ನು ಅಕ್ಕಿ ತೊಳೆಯಲು ಬಳಸುತ್ತಿದ್ದೇವೆ. ಈ ನೀರನ್ನು ಚರಂಡಿಗೆ ಬಿಡುವ ಬದಲು ಸಂಗ್ರಹಿಸಿ ಲಾಲ್ ಬಾಗಿನ ಗಿಡಗಳಿಗೆ ಎರೆಯಲು ಕಳಿಸಿದೆವು. ನಂತರ ನಾವೇ ಗಿಡ ನೆಡುವ ಕಾರ್ಯ ಪ್ರಾರಂಭಿಸಿ ಆ ಗಿಡಗಳಿಗೆ ಅಕ್ಕಿ ತೊಳೆದ ನೀರನ್ನು ಉಣಿಸಲು ಪ್ರಾರಂಭಿಸಿದೆವು. ನಮಗೆ ಹಣ್ಣು ಹಂಪಲು, ಉರುವಲುಗಳನ್ನು ನೀಡುವುದರ ಜೊತೆಗೆ ನಮ್ಮ ಉಸಿರಾಟಕ್ಕೆ ಅಗತ್ಯವಾದ ಆಮ್ಲಜನಕವನ್ನೂ ಮರಗಳು ಉತ್ಪಾದನೆ ಮಾಡುತ್ತವೆ. ಇದನ್ನು ಅರ್ಥ ಮಾಡಿಕೊಳ್ಳದೆ ನಾವು ಅಭಿವೃದ್ಧಿಯ ಹೆಸರಲ್ಲಿ ಮರಗಳನ್ನು ನಾಶ ಮಾಡುತ್ತಿದ್ದೇವೆ. ಇದೇ ಗತಿಯಲ್ಲಿ ಮುಂದುವರೆದರೆ ನಮ್ಮ ಮುಂದಿನ ಜನಾಂಗಕ್ಕೆ ಯಾವ ಇಂಧನವೂ ಉಳಿದಿರುವುದಿಲ್ಲ ಮತ್ತು ಉಸಿರಾಡಲು ಶುದ್ಧ ಗಾಳಿಯೂ ಇರುವುದಿಲ್ಲ. ಈ ನಿಟ್ಟಿನಲ್ಲಿ ನಾವು ಸುಮಾರು ಆರು ವರ್ಷಗಳ ಹಿಂದೆ ಗಿಡ ನೆಡುವ “ಹಸಿರು ಭಾನುವಾರ” ಕಾರ್ಯಕ್ರಮ ಪ್ರಾರಂಭಿಸಿ ಇಂದಿನ ವರೆಗೂ ನಿರಂತರವಾಗಿ ನಡೆಸಿಕೊಂಡು ಬಂದಿದ್ದೇವೆ. ಈ ಕಾರ್ಯಕ್ರಮದಲ್ಲಿ, ವಿದ್ಯಾರ್ಥಿಗಳು, ಜನಸಾಮಾನ್ಯರು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.

ನಮ್ಮ ಅಡುಗೆ ಮನೆಗಳಿಂದ ಹೊರಬೀಳುವ ಪ್ಲಾಸ್ಟಿಕ್ ಇನ್ನೊಂದು ಸಮಸ್ಯೆ. ಪ್ಲಾಸ್ಟಿಕ್ ಮತ್ತು ಪಾಲಿಯೆಸ್ಟರ್ ಬಳಕೆಯನ್ನು ಕಡಿಮೆ ಮಾಡುವುದು ಮತ್ತು ಮರುಬಳಕೆ ಮಾಡುವುದು ಮಾತ್ರವೇ ಈ ಸಮಸ್ಯೆಗೆ ಸ್ವಲ್ಪಮಟ್ಟಿನ ಪರಿಹಾರ. ಆದುದರಿಂದ ನಾವೆಲ್ಲ ಎಲ್ಲಿಗೆ ಹೋದರೂ ಹತ್ತಿಬಟ್ಟೆಯ ಚೀಲಗಳನ್ನು ಜೊತೆಯಲ್ಲಿರಿಸಿಕೊಳ್ಳೋಣ, ಸ್ಟೀಲ್ ಲೋಟ ಮತ್ತು ಬಾಟಲಿಗಳನ್ನು ಜೊತೆಯಲ್ಲಿಯೇ ಇರಿಸಿಕೊಳ್ಳೋಣ. ಹಿಂದೆ ನಾವು ಕಾಗದವನ್ನು ಸರಸ್ವತಿಯೆಂದು ಭಾವಿಸಿ ಪೂಜೆ ಮಾಡುತ್ತಿದ್ದೆವು. ಆದರೆ ಇಂದು ಶೌಚಾಲಯದಲ್ಲಿಯೂ ಕಾಗದವನ್ನು ಬಳಸುತ್ತಿದ್ದೇವೆ. ಕಾಗದದ ಈ ದುರ್ಬಳಕೆಯನ್ನು ನಿಲ್ಲಿಸೋಣ. ತ್ಯಾಜ್ಯವನ್ನು ಮರುಬಳಕೆ ಮಾಡಿ ಪೆನ್ ಸ್ಟಾಂಡ್ ಮುಂತಾದ ಉಪಯುಕ್ತ ವಸ್ತುಗಳನ್ನು ತಯಾರಿಸುವ ಕಲೆಯನ್ನು ಕಲಿಯೋಣ. ಅಭಿವೃದ್ಧಿಯ ಹೆಸರಿನಲ್ಲಿ ನಾವು, ಮಣ್ಣು, ನೀರು ಮತ್ತು ಗಾಳಿಯನ್ನು ಕಲುಷಿತಗೊಳಿಸಿದ್ದೇವೆ. ಇದರ ಪರಿಹಾರವೂ ನಮ್ಮಿಂದಲೇ ಪ್ರಾರಂಭವಾಗಲಿ. ಪರಿಸರಕ್ಕೆ ಹಾನಿ ಮಾಡುವ ವಸ್ತುಗಳ ಬಳಕೆಯನ್ನು ನಿಲ್ಲಿಸೋಣ, ಕಡಿಮೆ ಮಾಡೋಣ, ಮರುಬಳಕೆ ಮಾಡೋಣ ಮತ್ತು ಮೌಲ್ಯ ವರ್ಧನೆ ಮಾಡಿ ಆರ್ಥಿಕವಾಗಿಯೂ ಬಳಸಿಕೊಳ್ಳೋಣ. ಅದಮ್ಯ ಚೇತನವು ಕೈಗೆತ್ತಿಕೊಂಡಿರುವ ಈ ಎಲ್ಲ ಕಾರ್ಯಗಳನ್ನು ಪ್ರತಿಯೊಬ್ಬ ಗ್ರಾಮ ಪಂಚಾಯತಿ ಸದಸ್ಯರೂ ತಮ್ಮ ತಮ್ಮ ಪ್ರದೇಶದ ವ್ಯಾಪ್ತಿಯಲ್ಲಿ ಪ್ರಾರಂಭಿಸಬಹುದು. ಇದಕ್ಕೆ ಬೇಕಾದ ಸಲಹೆ, ಸಹಾಯಗಳನ್ನು ನೀಡಲು ಅದಮ್ಯ ಚೇತನ ಸಂಸ್ಥೆ ಸದಾ ಸಿದ್ಧವಿದೆ. ★

# ಹಾಸನ ಜಿಲ್ಲೆಯ ಕೆಲವು ದೇವಾಲಯಗಳು

ದೇಗುಲದರ್ಶನ ಮಾಲಿಕೆ - 8

ಈ ತಿಂಗಳ ದೇಗುಲದರ್ಶನ ಕಾರ್ಯಕ್ರಮಕ್ಕಾಗಿ ನಿಮ್ಮನ್ನು ಹಾಸನ ಜಿಲ್ಲೆಗೆ ಕರೆದೊಯ್ಯುತ್ತಿದ್ದೇವೆ. ಹಾಸನ ಜಿಲ್ಲೆಯ ದೇಗುಲಗಳೆಲ್ಲವನ್ನೂ ನೋಡುವುದಕ್ಕೆ ಅನೇಕ ದಿನಗಳೇ ಬೇಕು. ಮೊದಲಿಗೆ ಹಳೇಬೀಡು ಮತ್ತು ಸುತ್ತಲಿನ ಕೆಲವು ದೇಗುಲಗಳನ್ನು ನೋಡೋಣ. ಇವೆಲ್ಲವೂ ಹನ್ನೆರಡನೆಯ ಶತಮಾನದ ಕಾಲದವು; ಹೊಯ್ಸಳ ಶಿಲ್ಪಕಲೆಯ ಅಮೋಘ ಕಾಣಿಕೆಗಳು.



ಹನ್ನೆರಡನೆಯ ಶತಮಾನದ ವೇಳೆಗೆ ಹೊಯ್ಸಳ ಅರಸರ ರಾಜಧಾನಿಯಾಗಿ ದೋರಸಮುದ್ರವೆಂಬ ಹೆಸರಿನಿಂದ ಖ್ಯಾತವಾಗಿದ್ದ ಹಳೇಬೀಡು ದೇವಾಲಯ ಶಿಲ್ಪಕಲೆಯ ಅಮೂಲ್ಯ ಭಂಡಾರವೇ ನಿಜ. ಸದ್ಯದಲ್ಲೇ ಬೇಲೂರು, ಸೋಮನಾಥಪುರಗಳೊಡನೆ ವಿಶ್ವ ಪಾರಂಪರಿಕ ಸ್ಮಾರಕಗಳ ಪಟ್ಟಿಯಲ್ಲಿ ಸ್ಥಾನಪಡೆಯಲಿರುವ ಹಳೇಬೀಡಿನಲ್ಲಿ ಅನೇಕ ದೇಗುಲಗಳಿವೆ. ಇಲ್ಲಿನ ಹೊಯ್ಸಳೇಶ್ವರ ದೇವಾಲಯ ಜಗತ್ಪ್ರಸಿದ್ಧವಾದುದು. ಗುಡಿಯ ಹೊರಭಿತ್ತಿಯ ಶಿಲ್ಪಗಳು, ನಂದಿ, ಒಳಗುಡಿಯ ಶಿವಲಿಂಗಗಳು, ಭುವನೇಶ್ವರಿಯ ವಿನ್ಯಾಸಗಳು, ಬಗೆಬಗೆಯ ವಿನ್ಯಾಸದ ಕಂಬಗಳು -ಎಲ್ಲವೂ ಮನಮೋಹಕವಾಗಿವೆ. ಪುರಾತತ್ವ ಸಂಗ್ರಹಾಲಯದಲ್ಲಿ ಇರಿಸಿರುವ ಶಿಲ್ಪಗಳೂ ಆಸಕ್ತಿ ಮೂಡಿಸುವಂತಹವು. ಮ್ಯೂಸಿಯಂ ಹೊರಾವರಣದಲ್ಲಿ ಇರಿಸಿರುವ ಗೊಮ್ಮಟೇಶ್ವರನ ಶಿಲ್ಪವು ಭವ್ಯವಾಗಿದೆ.

ಹಳೇಬೀಡಿನಿಂದ ಒಂದು ಕಿಮೀ ದೂರದ ಬಸ್ತಿಹಳ್ಳಿಯಲ್ಲಿ ಪಾರ್ಶ್ವನಾಥ ಮತ್ತು ಶಾಂತಿನಾಥ ತೀರ್ಥಂಕರರ ಎರಡು ಭವ್ಯವಾದ ಬಸದಿಗಳಿವೆ. ಎತ್ತರವಾದ ಕಟ್ಟಡಗಳು, ಕಂಬಗಳು, ಪ್ರವೇಶಮಂಟಪ ಎಲ್ಲವೂ ಗಮನ ಸೆಳೆಯುತ್ತವೆ. ಅಲ್ಲೇ ಅನತಿದೂರದಲ್ಲಿರುವ ಕೇದಾರೇಶ್ವರ ದೇವಾಲಯದ ಹೊರಗೋಡೆಗಳನ್ನು ಅಲಂಕರಿಸಿರುವ ದೇವತಾಶಿಲ್ಪಗಳು ಹೊಯ್ಸಳಶಿಲ್ಪಕಲೆಯ ಪಾರಮ್ಯಕ್ಕೆ ನಿದರ್ಶನಗಳಾಗಿವೆ. ಬಸ್ತಿಹಳ್ಳಿಯಿಂದ ಎರಡು ಕಿಮೀ ದೂರದ ಹುಲಿಕೆರೆಯಲ್ಲಿ ಹೊಯ್ಸಳರ ಕಾಲದ ಸೊಗಸಾದ ಪುಷ್ಕರಿಣಿಯಿದೆ. ಸೋಪಾನಗಳ ಸುತ್ತ ಹಲವು ದೇವತಾಕೋಷ್ಠಗಳ ವಿನ್ಯಾಸವು ಆಕರ್ಷಕವಾಗಿದೆ. ಮುಂದೆ ಪುಷ್ಪಗಿರಿ ಎಂಬ ಗುಡ್ಡವೊಂದರ ಮೇಲೆ ಮಲ್ಲಿಕಾರ್ಜುನನ ಗುಡಿಯಿದೆ. ಇತ್ತೀಚೆಗೆ ಪುನರ್ನಿರ್ಮಾಣಗೊಂಡಿರುವ ಹೊಯ್ಸಳ ಕಾಲದ ಗುಡಿಯಲ್ಲಿ ನಿತ್ಯಪೂಜಾದಿಗಳು ಸಾಂಗವಾಗಿ ನಡೆಯುತ್ತಿವೆ.

ಹಳೇಬೀಡಿನಲ್ಲಿರುವ ಇತರ ಗುಡಿಗಳಲ್ಲಿ ರಂಗನಾಥ, ಕೋಟೆ ಆಂಜನೇಯ, ಮುತ್ತಿನ ವೀರಭದ್ರ, ಮೊದಲಾದವು ಮುಖ್ಯವಾದವು. ಸರ್ಪಶಯ್ಯೆಯಲ್ಲಿ ಒರಗಿರುವ ರಂಗನಾಥನ ವಿಗ್ರಹವು ಈ ಮಾದರಿಯ ಅತಿಸುಂದರ ಶಿಲ್ಪಗಳಲ್ಲಿ ಒಂದು. ಮುಂದೆ, ಎಂಟು ಕಿಮೀ ದೂರದಲ್ಲಿರುವ ನರಸೀಪುರದಲ್ಲಿ ಯೋಗಾನರಸಿಂಹ ದೇವಾಲಯವಿದೆ. ಇಲ್ಲಿರುವ ದೇವತಾಮೂರ್ತಿ ಹೊಯ್ಸಳ ಶಿಲ್ಪಕಲೆಯ ಉತ್ಕೃಷ್ಟ ಮಾದರಿಯಾಗಿದೆ.



ಹಳೇಬೀಡಿನ ಸುತ್ತಲಿನ ದೇವಾಲಯಗಳಲ್ಲಿ ಚಟಚಟ್ಟನಹಳ್ಳಿಯ ಶಿವ ದೇವಾಲಯವೂ ದರ್ಶನೀಯವಾಗಿದೆ. ಹೊರಭಿತ್ತಿಗಳಲ್ಲಿ ಶಿಲ್ಪಾಲಂಕಾರವಿರದಿದ್ದರೂ ಕಟ್ಟಡದ ವಿನ್ಯಾಸ ಮನಸೆಳೆಯುತ್ತದೆ. ಇಲ್ಲಿರುವ ಶಿವನ ಮೂರ್ತಿಯನ್ನು ಚಟಚಟ್ಟೇಶ್ವರ ಎಂದು ಹೆಸರಿಸಿದೆ. ಒಳಗುಡಿಯೊಂದರಲ್ಲಿ ಇರಿಸಿರುವ ಸೂರ್ಯನ ಶಿಲ್ಪವೂ ಸುಂದರವಾಗಿದೆ.

ಹಳೇಬೀಡಿನಿಂದ ಹಾಸನದ ಕಡೆಗೆ ಬರುವ ದಾರಿಯಲ್ಲಿ ಅಡಗೂರು ಎಂಬ ಊರಿನಲ್ಲಿ ಲಕ್ಷ್ಮೀನಾರಾಯಣ ದೇವಾಲಯವಿದೆ. ಇಲ್ಲಿರುವ ದೇವತಾವಿಗ್ರಹಗಳಲ್ಲಿ ವೇಣುಗೋಪಾಲನ ವಿಗ್ರಹವು ಭಗ್ನವಾಗಿದ್ದರೂ ತನ್ನ ಸೌಂದರ್ಯದಿಂದ ಮನಸೆಳೆಯುತ್ತದೆ. ಅಲಕ್ಷ್ಯಕ್ಕೆ ಗುರಿಯಾಗಿರುವ ಈ ದೇಗುಲದ ಸಂರಕ್ಷಣೆ ಅತ್ಯಗತ್ಯ. ಮುಂದೆ ಕಾಣಸಿಗುವ ಕೊಂಡಜ್ಜಿ ಎಂಬ ಗ್ರಾಮದಲ್ಲಿ ಪ್ರತಿಷ್ಠಾಪಿಸಲಾಗಿರುವ ವರದರಾಜ ಸ್ವಾಮಿಯ ವಿಗ್ರಹವು ಹೊಯ್ಸಳ ಶೈಲಿಯ ಎತ್ತರದ ಮೂರ್ತಿಗಳಲ್ಲೊಂದು. ಸುಮಾರು 18 ಅಡಿಗಳಷ್ಟು ಎತ್ತರವಾಗಿರುವ ಈ ಶಿಲ್ಪವು ತನ್ನ ಭವ್ಯತೆ, ಸೌಂದರ್ಯಗಳಿಂದ ಗಮನಸೆಳೆಯುತ್ತದೆ. ಹಾಸನದಿಂದ ಬೆಂಗಳೂರಿಗೆ ಬರುವ ಮಾರ್ಗದಲ್ಲಿ ಶಾಂತಿಗ್ರಾಮ ಎಂಬ ಊರಿನಲ್ಲಿ ವರದನರಸಿಂಹ ದೇವಾಲಯವೂ ಸೇರಿದಂತೆ, ಹೊಯ್ಸಳ ಕಾಲದ ಹಲವು ದೇವಾಲಯಗಳನ್ನು ಸಂದರ್ಶಿಸಬಹುದು. ★

**ಟಿ ಎಸ್ ಗೋಪಾಲ್ | ಕೆಂಗೇರಿ ಚಕ್ರಪಾಣಿ**







ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ವೀಕ್ಷಿಸಿ
http://YouTube.com/AnanthkumarPratishthana







# ಇತಿಹಾಸದ ಪರಿಪ್ರೇಕ್ಷ್ಯದಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆ

ಕೆ ಜನಾರ್ದನ ತುಂಗ

ನಾವು ವಾಸವಾಗಿರುವ ಈ ಬ್ರಹ್ಮಾಂಡವನ್ನು ಕಲ್ಪಿಸಿಕೊಳ್ಳೋಣ. ಇದು ನಾವು ನಿಂತಿರುವ ಜಾಗದಿಂದಲೇ ಪ್ರಾರಂಭವಾಗುತ್ತದೆ; ನಾವಿರುವ ಜಾಗವನ್ನು ಒಳಗೊಳ್ಳದಿದ್ದರೆ ಬ್ರಹ್ಮಾಂಡವು ಪೂರ್ಣವಾಗುವುದೂ ಇಲ್ಲ. ಹೀಗಾಗಿ, ನಾವು ವಾಸಮಾಡುತ್ತಿರುವ ಜಾಗವು ಮಹತ್ವಪೂರ್ಣವಾಗಿದೆ. ಈ ಬ್ರಹ್ಮಾಂಡದಲ್ಲಿರುವ ಚರಾಚರಗಳೂ ಅವಿಚ್ಛಿನ್ನ ಪರಂಪರೆಯನ್ನು ಹೊಂದಿವೆ. ಸಾವಿರಾರು ಕೋಟಿ ವರ್ಷಗಳಿಂದ ಮುಂದುವರೆದುಕೊಂಡು ಬಂದಿದ್ದು ವಿಕಾಸಕ್ರಮದಲ್ಲಿ ಇಂದಿನ ಸ್ಥಿತಿಯನ್ನು ಬಂದು ತಲುಪಿವೆ.ಜಗತ್ತಿನಲ್ಲಿರುವ ಒಂದು ತಳಿ ನಾಶವಾದರೂ ಅದು ಅಂತಿಮವಾಗಿ ವಿನಾಶದತ್ತ ಸಾಗುತ್ತದೆ ಎಂದು "ಸರಣಿ ಸಿದ್ಧಾಂತ" ಹೇಳುತ್ತದೆ. ಆದುದರಿಂದ ನಮ್ಮ ಪರಿಸರದಲ್ಲಿರುವ ಜೀವವೈವಿಧ್ಯವನ್ನು ನಮ್ಮದೇ ಉಳಿವಿಗಾಗಿಯಾದರೂ ರಕ್ಷಿಸಬೇಕಾಗಿರುವುದು ನಮ್ಮ ಕರ್ತವ್ಯ.

ನಾಲ್ಕಾರು ಸಾವಿರ ವರ್ಷಗಳ ಹಿಂದೆಯೇ ವಿಕಾಸಗೊಂಡ ನಾಗರಿಕತೆಗಳು ಇದ್ದ ಕುರುಹುಗಳು ದೊರೆತಿವೆ. ಆದರೆ ಆ ಯಾವ ನಾಗರಿಕತೆಗಳೂ ಇಂದು ಉಳಿದುಕೊಂಡು ಬಂದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ 8000 ವರ್ಷಗಳಿಗೂ ಹೆಚ್ಚು ಪುರಾತನವಾದ ಭಾರತೀಯ ನಾಗರಿಕತೆಯು ಇಂದಿಗೂ ಉಳಿದುಕೊಂಡು ಬಂದಿದೆ.

ಭಾರತೀಯ ಪರಂಪರೆ 22000 ವರ್ಷಗಳಿಗೂ ಹೆಚ್ಚು ಪುರಾತನವಾದದ್ದು ಎಂದು ವಾದಿಸುವವರೂ ಇದ್ದಾರೆ. ಅದೇನೇ ಇರಲಿ, ಇಷ್ಟೊಂದು ದೀರ್ಘ ಕಾಲ ಒಂದೇ ರೀತಿಯ ಜೀವನ ಶೈಲಿ ಮತ್ತು ಜ್ಞಾನ ಮಾರ್ಗಗಳನ್ನು ಕಾಪಾಡಿಕೊಂಡು ಬಂದಿರುವ ಪರಂಪರೆ ನಮ್ಮದು ಎಂಬ ಹೆಮ್ಮೆ ನಮಗಿರಲಿ. ವೇದಗಳು ವಿಶ್ವದ ಅತ್ಯಂತ ಪ್ರಾಚೀನ ಸಾಹಿತ್ಯವಾಗಿವೆ. ವೇದಗಳ ಕಾಲದಿಂದಲೇ ಭಾರತವನ್ನು ಒಂದೇ ಜನಪದವಾಗಿ ಅಥವಾ ರಾಷ್ಟ್ರವನ್ನಾಗಿ ಕಲ್ಪಿಸಿಕೊಂಡದ್ದು ಕಂಡು ಬರುತ್ತದೆ. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂದ ರಾಮಾಯಣದಲ್ಲಿ ಶ್ರೀ ರಾಮನು ಯಾವುದೇ ಅಡೆತಡೆಯಿಲ್ಲದೆ ಆಸೇತು ಹಿಮಾಚಲ ಸಂಚರಿಸಿದ ವಿವರಗಳು ದೊರೆಯುತ್ತವೆ. ವೇದಗಳ ನಂತರ ಬಂದ ಉಪನಿಷತ್ತುಗಳು ಸಮಾನತೆಯನ್ನು ಸಾರುವ "ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ, ಅಯಮಾತ್ಮಾ ಬ್ರಹ್ಮ, ಪ್ರಜ್ಞಾನಂ ಬ್ರಹ್ಮ" ಎಂಬ ಮಹಾವಾಕ್ಯಗಳನ್ನು ನಿರೂಪಿಸಿದವು.

ಉಪನಿಷತ್ತುಗಳ ಸಾರವಾದ ಭಗವದ್ಗೀತೆಯು ಕರ್ಮದ ಮಹತ್ವ ಮತ್ತು ಅನಿವಾರ್ಯತೆಯನ್ನು ಬೋಧಿಸಿದ್ದಲ್ಲದೆ "ಕರ್ಮಣ್ಯೇವಾಧಿಕಾರಸ್ತೇ, ಮಾ ಫಲೇಷು ಕದಾಚನ" ಎಂಬ ತತ್ತ್ವವನ್ನು ನಿರೂಪಿಸಿತು. ಸಾರ್ವಕಾಲಿಕ, ವಿಶ್ವಮಾನ್ಯ ಕೃತಿಗಳಾದ ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪುರಾಣಗಳು ಜೀವನವಿಧಾನವನ್ನು ಬೋಧಿಸುತ್ತಿವೆ. ಇವೆಲ್ಲವೂ ಭಾರತೀಯರಿಗೆ ಸದಾಕಾಲವೂ ದಾರಿ ತೋರುವ ಅಚಲ ದೀಪಸ್ತಂಭಗಳಂತಿವೆ. "ಪರೋಕ್ಷಪ್ರಿಯಾ ಹಿ ವೈ ದೇವಾಃ" ಎನ್ನುತ್ತಾರೆ. ದೇವರನ್ನು ನೇರವಾಗಿ ಆರಾಧಿಸುವ ಬದಲು ಅವನ ಸೃಷ್ಟಿಯನ್ನು ಆರಾಧಿಸಿದರೆ ಹೆಚ್ಚು ಪ್ರಿಯವಾಗುತ್ತದೆ ಎಂದು ಹೇಳುತ್ತಾರೆ. ಈ ಕಾರಣದಿಂದಲೇ, ನೆಲ, ನೀರು, ಸಸ್ಯಗಳು, ಪ್ರಾಣಿಗಳು, ಪರ್ವತಗಳು, ನದಿಗಳು, ಸಾಗರಗಳು, ಗ್ರಹತಾರೆಗಳು, ಗಾಳಿ, ಖಾಲಿ ಆಕಾಶ ಎಲ್ಲವೂ ನಮಗೆ ಆರಾಧ್ಯ ವಿಷಯಗಳೇ. ಇವುಗಳನ್ನು ಆದರಿಸಿ ಕಾಪಾಡಿಕೊಳ್ಳುವ ಮೂಲಕ ಸೃಷ್ಟಿಯ ನಿರಂತರತೆಯನ್ನು ಕಾಪಾಡಿಕೊಳ್ಳುವುದು ಸಾಧ್ಯ ಎಂಬ ದೂರದರ್ಶಿತ್ವ ಈ ಜ್ಞಾನದ ಹಿಂದೆ ಅಡಗಿದೆ.

ನಮ್ಮ ದೇಶದ ಇತಿಹಾಸವನ್ನೇ ಗಮನಿಸಿ. ವೇದಗಳ ಕಾಲದಲ್ಲಿಯೇ ಸಭೆ ಮತ್ತು ಸಮಿತಿಗಳ ಮೂಲಕ ಪ್ರಜಾರಾಜ್ಯದ ಕಲ್ಪನೆ ಜಾರಿಯಲ್ಲಿತ್ತು. ಅನೇಕ ಗಣರಾಜ್ಯಗಳೂ ಇದ್ದವು. ರಾಜನನ್ನು ಆಯ್ಕೆ ಮಾಡುವ ಅಧಿಕಾರವೂ ಈ ಸಭೆ ಮತ್ತು ಸಮಿತಿಗಳಿಗಿತ್ತು. ರಾಜನು ಸಭೆ ಮತ್ತು ಸಮಿತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಆಡಳಿತ ನಡೆಸಬೇಕಾಗಿತ್ತು. ಪ್ರಾಚೀನ ಕಾಲದಿಂದಲೂ ಸುವ್ಯವಸ್ಥಿತ ಸಮಾಜಕ್ಕೆ ಅಗತ್ಯವಾದ ಕಾನೂನುಗಳೂ ಜಾರಿಯಲ್ಲಿದ್ದವು. ವ್ಯಾಪಾರ ವಹಿವಾಟುಗಳ ವಿಷಯದಲ್ಲಿ ಇಡೀ ಭಾರತವು ಒಂದು ಘಟಕವಾಗಿತ್ತು. ಅಂದು ಚಾಲ್ತಿಯಲ್ಲಿದ್ದ "ಸಾರ್ಥಗಳು" ದೇಶದ ಉದ್ದಗಲಗಳಿಗೆ ವ್ಯಾಪಿಸಿದ್ದು ಆರ್ಥಿಕ ಮತ್ತು ಸಾಂಸ್ಕೃತಿಕ ವಿನಿಮಯಗಳ ಸಾಧನಗಳಾಗಿದ್ದವು. ಯಾಜ್ಞವಲ್ಕ್ಯ ಸ್ಮೃತಿ ಮತ್ತು ಮನುಸ್ಮೃತಿಗಳು ಇಡೀ ದೇಶಕ್ಕೆ ಅನ್ವಯವಾಗುವ ಏಕರೂಪದ ಕಾನೂನುಗಳಾಗಿದ್ದವು. ಕಾಲಕ್ರಮೇಣ, ಭಾರತವು ಪರಕೀಯರ ಆಕ್ರಮಣಕ್ಕೆ ಒಳಗಾಯಿತು. ಮೊಗಲರು, ನಿಜಾಮರು, ದಖ್ಖಣದ ಸುಲ್ತಾನರು, ಆಂಗ್ಲರು ಭಾರತವನ್ನು ಕಾಲಾನುಕ್ರಮದಲ್ಲಿ ಆಳತೊಡಗಿದರು.

ಆದರೆ ಇತಿಹಾಸವನ್ನು ಗಮನಿಸಿದರೆ ಭಾರತದ ಜನರು ಎಂದಿಗೂ ವಿದೇಶೀಯರಿಗೆ ಸಮಗ್ರವಾಗಿ ಅಡಿಯಾಳುಗಳಾಗಿ ಬದುಕಲಿಲ್ಲ ಎಂಬ ವಿಚಾರ ವೇದ್ಯವಾಗುತ್ತದೆ. ಮೊಘಲರ ಸಾಮ್ರಾಜ್ಯಕ್ಕಿಂತ ಮರಾಠರ ಸಾಮ್ರಾಜ್ಯ ವಿಸ್ತಾರವಾಗಿತ್ತು. ವಿಜಯನಗರ ಸಾಮ್ರಾಜ್ಯವು ದಕ್ಷಿಣೋತ್ತರ ಭಾರತದಲ್ಲಿ ವಿಸ್ತರಿಸಿತ್ತು. ಆಂಗ್ಲರ ಆಡಳಿತಾವಧಿಯಲ್ಲಿಯೂ ಕಾಲಕಾಲಕ್ಕೆ ಅನೇಕ ಸ್ಥಳೀಯ ನಾಯಕರು ಹುಟ್ಟಿಕೊಂಡು ತಮ್ಮ ಸ್ವಾಯತ್ತತೆಯನ್ನು ಘೋಷಿಸಿಕೊಂಡಿರುವುದು ಇತಿಹಾಸದುದ್ದಕ್ಕೂ ಕಂಡು ಬರುತ್ತದೆ. ಒಂದು ಕಡೆ ಕ್ರಾಂತಿಕಾರಿ ನಾಯಕರು ಜನರಲ್ಲಿ ಸ್ವಾತಂತ್ರ್ಯದ ಕಿಡಿಯನ್ನು ಉದ್ದೀಪಿಸುತ್ತಿದ್ದರೆ ಇನ್ನೊಂದು ಕಡೆ ಅಹಿಂಸಾತ್ಮಕ ಮಾರ್ಗದಲ್ಲಿ ಸತ್ಯಾಗ್ರಹಗಳ ಮೂಲಕ ಸ್ವಾತಂತ್ರ್ಯವನ್ನು ಪಡೆಯುವುದು ಸಾಧ್ಯ ಎಂಬ ಭರವಸೆಯನ್ನು ತಿಲಕ್, ಮಹಾತ್ಮಾ ಗಾಂಧಿ, ಪಟೇಲ್, ರಾಜಾಜಿ ಮುಂತಾದ ನಾಯಕರು ಜನರಲ್ಲಿ ಮೂಡಿಸಿದರು. ಸ್ವಾತಂತ್ರ್ಯಾನಂತರದ ಭಾರತದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ನೀತಿ ನಿರ್ದೇಶನಗಳನ್ನು ನೀಡುವ ಸಂವಿಧಾನವನ್ನು ಅಂಬೇಡ್ಕರ್ ಅವರ ಸಾರಥ್ಯದಲ್ಲಿ ನಮಗೆ ನಾವೇ ಕೊಟ್ಟುಕೊಂಡೆವು.

ವೇದಕಾಲದ ಕಲ್ಪನೆಗಳಾದ ಸಭಾ ಮತ್ತು ಸಮಿತಿಗಳ ಮಾದರಿಯಲ್ಲಿಯೇ ಸ್ಥಳೀಯ ಆಡಳಿತ ವ್ಯವಸ್ಥೆ ಇಂದು ಜಾರಿಯಲ್ಲಿದೆ. ಈ ಸ್ಥಳೀಯ ಆಡಳಿತ ವ್ಯವಸ್ಥೆಯ ದಿಶಾನಿರ್ದೇಶನಗಳೂ ಅಂದಿನ ಮಾದರಿಯನ್ನೇ ಹೊಂದಿರುವುದು ಅಚ್ಚರಿಯ ವಿಷಯ. ನೆಲಜಲ, ನಾಡುನುಡಿ, ಪರಿಸರ ಸಂರಕ್ಷಣೆಗಳೇ ಸ್ಥಳೀಯ ಆಡಳಿತದ ಮಂತ್ರಗಳಾಗಿವೆ. ಭಾರತದ ಇತಿಹಾಸವನ್ನು ಗಮನಿಸಿದರೆ, ಸ್ವಾಯತ್ತತೆಯ ಹಂಬಲ ಎಂದಿನಿಂದಲೂ ತಡೆಯಿಲ್ಲದೆ ಉಳಿದುಕೊಂಡು ಬಂದಿರುವುದು ಕಂಡು ಬರುತ್ತದೆ. ಸ್ವಾಯತ್ತತೆಯನ್ನು ಹೊಂದಿರುವ ಗ್ರಾಮಸಭೆಗಳ ಯಶಸ್ಸು ಜನಪದದ, ದೇಶದ ಯಶಸ್ಸಿಗೂ ಕಾರಣವಾಗುತ್ತದೆ. ಪಂಚಾಯತಿ ವ್ಯವಸ್ಥೆಯ ಮೂಲಕ ನಮ್ಮ ಕೈಗಳಿಗೆ ಅಧಿಕಾರ ಮರಳಿ ದೊರೆತಿದೆ. ಅದನ್ನು ಪ್ರಜ್ಞಾಪೂರ್ವಕವಾಗಿ ಸದ್ಬಳಕೆ ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಇದಕ್ಕೆ ಪೂರಕವಾಗಿ ನಮ್ಮ ದೇಶದ ಸಂಸ್ಕೃತಿಯ ಪುರಾತನತೆಯ ಬಗ್ಗೆ, ನಮ್ಮ ವಾಸಸ್ಥಳದ ಮಹತ್ವದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳೋಣ.★

ಅನಂತಪಥ
ANANTHKUMAR PRATISHTHANA

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: 8884182415

# ಅನಂತ ಹೃದಯಕ್ಕೆ ಹತ್ತಿರವಾದ ಗೀತೆ

ಪುಟ 1 ರಿಂದ

ಅನಂತಕುಮಾರರಿಗೆ ಗೀತೆಯ ಅಷ್ಟೂ ಶ್ಲೋಕಗಳು ಕಂಠಸ್ಥವಾಗಿದ್ದವು. ಅದಕ್ಕೂ ಒಂದು ಕಾರಣವಿದೆ. ತಾಯಿಯವರು ಮಕ್ಕಳಿಗಾಗಿ ಪ್ರಾರಂಭಿಸಿದ ಗೀತೆಯ ತರಗತಿಗಳಲ್ಲಿ ಅನಂತಕುಮಾರರು ನಿರಂತರವಾಗಿ ಭಾಗವಹಿಸುತ್ತಿದ್ದರು. ಅವರು ಪ್ರೌಢಶಾಲೆಗೆ ಸೇರುವ ಹೊತ್ತಿಗೆ ಗೀತೆಯ ಅಭ್ಯಾಸಕ್ಕೆ ಬರುತ್ತಿದ್ದ ಮಕ್ಕಳೆಲ್ಲ ಚಿಕ್ಕ ಹುಡುಗರಾಗಿದ್ದರು. ಆದುದರಿಂದ ಮಕ್ಕಳಿಗೆ ಗೀತೆಯನ್ನು ಬೋಧಿಸುವ ಕೆಲಸವನ್ನು ತಾಯಿ ಅನಂತಕುಮಾರರಿಗೆ ವಹಿಸಿದರು. ಈ ರೀತಿಯಾಗಿ, ಕಂಠಸ್ಥವಾಗಿದ್ದ ಗೀತೆಯ ಶ್ಲೋಕಗಳನ್ನು ಬಳಸಿಕೊಂಡು ನಿರರ್ಗಳವಾಗಿ ಮತ್ತು ಪ್ರಭಾವಶಾಲಿಯಾಗಿ ಸಾರ್ವಜನಿಕ ವೇದಿಕೆಗಳಲ್ಲಿ ಮಾತನಾಡುವುದು ಅವರಿಗೆ ಸುಲಭವಾಯಿತು."ಭಗವದ್ಗೀತೆಯ ಜೊತೆ ಅವರದು ನಿರಂತರ ಒಡನಾಟವಾಗಿತ್ತು. ಅಮ್ಮ ಕೊಟ್ಟ ಪುಸ್ತಕವೇ ಕೊನೆಯವರೆಗೂ ಅವರ ಬಳಿಯಿತ್ತು, ಈಗಲೂ ಇದೆ. ಪ್ರತಿನಿತ್ಯ ಅದನ್ನು ಓದದಿದ್ದರೆ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ನನಗೆ ನೆನಪಿರುವಂತೆ ಒಂದು ದಿನವೂ ಗೀತೆ ಓದುವುದನ್ನು ಅವರು ನಿಲ್ಲಿಸಲಿಲ್ಲ. ಅಪ್ಪ, ಅಮ್ಮ ತೀರಿಕೊಂಡ ಸಂದರ್ಭದಲ್ಲಿ ಮನೆಯಲ್ಲಿ ಸೂತಕವಿದ್ದಾಗಲೂ ಮನೆಯ ಹೊರಗೇ ಕುಳಿತು ಅದನ್ನು ಓದಿದ್ದಾರೆ. ಅವರು ಅಷ್ಟೊಂದು ಶಾಂತವಾಗಿರಲು, ಎಷ್ಟೇ ಕೆಲಸ ಮಾಡಿದರೂ ಆಯಾಸ ಪಟ್ಟುಕೊಳ್ಳದೆ ನಗುನಗುತ್ತಲೇ ಇರುವುದಕ್ಕೆ ಗೀತೆಯ ಜ್ಞಾನವೇ ಕಾರಣವಾಗಿತ್ತು. "ಗೀತೆಯನ್ನು ನಿತ್ಯವೂ ಓದು, ಮನಸ್ಸಿಗೆ ಸಮಾಧಾನ ಸಿಗುತ್ತದೆ" ಎಂದು ಹೇಳಿದ ಅಮ್ಮನ ಮಾತನ್ನು ಅವರು ಶಿರಸಾವಹಿಸಿ ಪಾಲಿಸಿದರು." ಹೀಗೆಂದು ಡಾ. ತೇಜಸ್ವಿನಿ ಅನಂತಕುಮಾರರು ನೆನಪಿಸಿಕೊಳ್ಳುತ್ತಾರೆ.

"ದೇವರ ತಲೆಗೆ ಹೂವನ್ನಾದರೂ..............." ಎಂಬುದು ವಾಡಿಕೆಯ ಮಾತು. ಆದರೆ ಅನಂತಕುಮಾರರು ದೇವರ ತಲೆಗೆ ಹೂವನ್ನೂ ತಪ್ಪಿಸಲಿಲ್ಲ, ಗೀತೆಯ ಪಠಣವನ್ನೂ ನಿಲ್ಲಿಸಲಿಲ್ಲ. ★

ಸಸ್ಯಲೋಕ ಪರಿಚಯ ಮಾಲಿಕೆ- 6

# ಬಿಲ್ವಪತ್ರೆಯ ಮಹತ್ವ



ಛಾಯಾ ಓಕ್ ಬಾಪಟ್

ಶಿವರಾತ್ರಿಯಂದು ಚಳಿ ಉತ್ತುಂಗದಲ್ಲಿರುತ್ತದೆ. ಈ ವ್ಯತ್ಯಯದಿಂದ ನಮ್ಮಲ್ಲಿ ಉಸಿರಾಟದ ತೊಂದರೆ, ನೆಗಡಿ, ಕೆಮ್ಮು, ಶೀತ ಕಂಡುಬರುತ್ತವೆ. ಈ ಸಂದರ್ಭದಲ್ಲಿ ಮಾಡುವ ಉಪವಾಸ ನಮ್ಮ ದೇಹವನ್ನು ಸಮತೋಲಿತಗೊಳಿಸುತ್ತದೆ. ಜಾಗರಣೆ ದೇಹದ ಉಷ್ಣವನ್ನು ಹೆಚ್ಚಿಸುತ್ತದೆ. ಶಿವಲಿಂಗಕ್ಕೆ ಅರ್ಪಿಸುವ ಬಿಲ್ವ ಪತ್ರೆ ಹೊರಸೂಸುವ ಆಮ್ಲಜನಕ ಉಸಿರಾಟದ ತೊಂದರೆ ನಿವಾರಿಸುತ್ತದೆ.

## ಪುರಾಣಗಳಲ್ಲಿ ಬಿಲ್ವಪತ್ರೆ ಗಿಡ



ತ್ರಿದಳಂ ತ್ರಿಗುಣಾಕಾರಂ
ತ್ರಿನೇತ್ರಂ ಚ ತ್ರಿಯಾಯುಧಂ|
ತ್ರಿಜನ್ಮ ಪಾಪಸಂಹಾರಂ
ಏಕಬಿಲ್ವಂ ಶಿವಾರ್ಪಣಂ||

-ಎಂದು ಆದಿಶಂಕರಾಚಾರ್ಯರು ಸ್ತುತಿಸಿದ್ದಾರೆ. ಭಾರತದಲ್ಲಿ ಕ್ರಿ.ಪೂ. ೪೦೦೦ - ಕ್ರಿಪೂ. ೮೦೦ ರ ನಡುವಿನ ವೇದ ಯುಗದ ಇತಿಹಾಸದಲ್ಲಿ ಬಿಲ್ವದ ಉಲ್ಲೇಖಗಳಿವೆ. ಯಜುರ್ವೇದದಲ್ಲೂ ಬಿಲ್ವದ ಉಲ್ಲೇಖಗಳಿವೆ. ದೇಗುಲಗಳ ಆಸು ಪಾಸಿನಲ್ಲೂ ಈ ಮರವನ್ನು ಕಾಣಬಹುದು. ಹಿಂದೂ ಧಾರ್ಮಿಕ ಆಚರಣೆಗಳಲ್ಲಿ ಬಿಲ್ವಕ್ಕೆ ಒಂದು ಪೂಜ್ಯ ಸ್ಥಾನವಿದೆ. ಶಿವನಿಗೆ ಅತ್ಯಂತ ಪ್ರೀತಿಪಾತ್ರವಾದ ಮರವಿದು ಎಂದು ಹೇಳುವ ಹಿಂದೂ ಧರ್ಮದಲ್ಲಿ, ಇದನ್ನು ಪುಷ್ಟೀಕರಿಸಲು ಅನೇಕ ಪೌರಾಣಿಕ ಕಥೆಗಳಿವೆ. ಪದ್ಮ ಪುರಾಣದಲ್ಲಿ ಬಿಲ್ವ ಮರವನ್ನು ನೆಟ್ಟವನು ಶಿವನನ್ನು ಸಂತುಷ್ಟಗೊಳಿಸುತ್ತಾನೆ ಎಂದಿದೆ. ದುರ್ಗಾಪೂಜೆಯ ಸಂದರ್ಭದಲ್ಲಿ ನಿದ್ದೆಯಲ್ಲಿರುವ ದುರ್ಗಾದೇವಿಯನ್ನು ಬಿಲ್ವವೃಕ್ಷದ ರೆಂಬೆಯನ್ನು ಬಳಸಿ ಎಚ್ಚರಿಸುತ್ತಾರೆ. ಎಚ್ಚರಗೊಂಡ ದೇವಿ ಈ ಮರದಲ್ಲೇ ನೆಲೆ ಹೊಂದುತ್ತಾಳೆ ಎಂಬ ಪ್ರತೀತಿ ಬಂಗಾಳದಲ್ಲಿ ಇದೆ. ಬಿಲ್ವಮರದ ಎಲೆಗಳು ಮೂರರ ಗುಂಪಿನಲ್ಲಿರುತ್ತದೆ. ಇದು ಬ್ರಹ್ಮ, ವಿಷ್ಣು, ಮಹೇಶ್ವರರ ಸಂಕೇತವೆಂದು ಭಾವಿಸಲಾಗಿದೆ.

## ಗಿಡದ ವಿವರ

ಬಿಲ್ವಪತ್ರೆ ಮರವು ಮಧ್ಯಮ ಪ್ರಮಾಣದ ಮರವಾಗಿದೆ. ದಕ್ಷಿಣ ಏಷ್ಯಾ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಬೆಳೆಯುತ್ತದೆ. ದೇವಸ್ಥಾನಗಳ ಪಕ್ಕ, ಉದ್ಯಾನವನಗಳಲ್ಲಿ ನೆಟ್ಟು ಬೆಳೆಸುತ್ತಾರೆ. ಕಡಲ ಮಟ್ಟದಿಂದ ೩೬೦೦ ಅಡಿಗಳಷ್ಟು ಎತ್ತರದವರೆಗಿನ ಪ್ರದೇಶಗಳಲ್ಲಿ ಇದು ಬೆಳೆಯುತ್ತದೆ. ಎಲ್ಲ ಹವಾಗುಣದಲ್ಲಿಯೂ ಈ ಮರ ಬೆಳೆಯುತ್ತದೆ. -೭ ಡಿಗ್ರಿ ಉಷ್ಣತೆ ಇರುವಲ್ಲೂ ಬಿಲ್ವವು ಬೆಳೆಯುತ್ತದೆ. ಬಿಲ್ವವು ಹಲವು ಬಗೆಯ ಮಣ್ಣಿನಲ್ಲಿ ಬೆಳೆಯಬಹುದು. ಇದು ರುಟಾಸಿಯೆ ಕುಟುಂಬಕ್ಕೆ ಸೇರಿದ್ದು ಅಜಿಲ್ ಮರ್ಮೆಲಸ್ (Aegle Marmelos)ಎಂದು ಸಸ್ಯಶಾಸ್ತ್ರೀಯ ಹೆಸರು. ಬಿಲ್ವ ಎಂದೂ ಗುರುತಿಸಲ್ಪಡುತ್ತದೆ.

## ಸಸ್ಯದ ಗುಣಲಕ್ಷಣಗಳು

ಪರ್ಣಪಾತಿ ಮರ. ಕೊಂಬೆಗಳಲ್ಲಿ ಮುಳ್ಳುಗಳಿವೆ. ತೊಗಟೆ ಬೂದು ಬಣ್ಣದ್ದಾಗಿದ್ದು, ಬೆಂಡು ಬೆಂಡಾಗಿರುವುದು. ಎಲೆಗಳು ತ್ರಿಪರ್ಣಿ (Trifoliate) ಹಾಗೂ ಸುವಾಸಿತವಾಗಿರುವುವು. ಎಲೆಗಳಲ್ಲಿ ಸುಗಂಧ ತೈಲಯುಕ್ತ ಪಾರದರ್ಶಕ ಗ್ರಂಥಿಗಳ ಚುಕ್ಕಿಗಳಿವೆ. ಈ ಕುಟುಂಬದ ಸಸ್ಯಗಳಲ್ಲಿ ದ್ವಿಲಿಂಗಿ ಅಥವ ಏಕಲಿಂಗಿ ಹೂಗಳು ಬಿಡುತ್ತವೆ. ಬಿಲ್ವದ ಹೂಗಳು ಹಸಿರು ಮಿಶ್ರ ಬಿಳಿ ಬಣ್ಣದಾಗಿರುತ್ತದೆ. ಸಣ್ಣ ಗೊಂಚಲಿನಲ್ಲಿ ಹೂ ಬಿಡುತ್ತದೆ. ಹೂವು ಪರಿಮಳದಿಂದ ಕೂಡಿರುತ್ತದೆ. ಸೇಬಿನ ಆಕಾರ ಹಾಗೂ ಗಾತ್ರದ ಕಾಯಿ ಬಿಡುವುದು. ಬಿಲ್ವದ ಹಣ್ಣಿನ ಒಂದು ವಿಶೇಷತೆ ಎಂದರೆ ಅದು ಎಳೆ ಕಾಯಿ , ಅಪಕ್ವ ಫಲ , ಮಾಗಿದ ಫಲ- ಈ ಯಾವುದೇ ಹಂತದಲ್ಲಿದ್ದರೂ ಒಂದಲ್ಲ ಒಂದು ರೀತಿಯಲ್ಲಿ ಪ್ರಯೋಜನಕ್ಕೆ ಬರುತ್ತದೆ. ಬಿಲ್ವದ ಮರದಲ್ಲಿ ಹಣ್ಣು ಪಕ್ವವಾಗಲು ದೀರ್ಘ ಕಾಲ ಆಗುತ್ತದೆ. ಹೂಗಳು ಪರಾಗಸ್ಪರ್ಶಕ್ಕೆ ಗುರಿಯಾಗಿ ಫಲಿತವಾಗಿ ಕಾಯಾಗಲು ಒಂದು ವರ್ಷವಾಗಲೂಬಹುದು. ಬಿಲ್ವದ ಹಣ್ಣು ದುಂಡಗಿರುತ್ತದೆ. ಮೊದಲು ಕಾಯಿಯು ಹಸಿರು ಬಣ್ಣದಾಗಿದ್ದು, ಬೂದು ಬಣ್ಣ ತಾಳುತ್ತದೆ. ಹಣ್ಣಿನ ಚಿಪ್ಪು ಗಟ್ಟಿಯಾಗಿರುತ್ತದೆ. ಒಳಗಿನ ತಿರುಳು ಕಿತ್ತಳೆ ಬಣ್ಣದ್ದಾಗಿರುತ್ತದೆ. ಬಿಲ್ವದ ಹಣ್ಣಿನಲ್ಲಿ ಎರಡು ವಿಧಗಳಿದ್ದು - ಗ್ರಾಮ್ಯ ವಿಧದಲ್ಲಿ ಹಣ್ಣುಗಳು ದೊಡ್ಡದಾಗಿದ್ದು ಮುಳ್ಳುಗಳ ಪ್ರಮಾಣ ಕಡಿಮೆ ಇರುತ್ತದೆ. ವನ್ಯವಿಧದಲ್ಲಿ ಗಾತ್ರ ಚಿಕ್ಕದಿದ್ದು ಮುಳ್ಳುಗಳು ಹೆಚ್ಚಿರುತ್ತವೆ.



## ರಾಸಾಯನಿಕ ಸಂಯೋಜನೆ

ಬಿಲ್ವದ ರಾಸಾಯನಿಕ ಸಂಯೋಜನೆಯಲ್ಲಿ ಮಾರ್ಮೆಲೋಸಿನ್, ಮಾರ್ಮೆಲೈಡ್, ಟ್ಯಾನಿಕ್ ಆಮ್ಲಗಳು, ಕೊಬ್ಬಿನಾಮ್ಲಗಳು ಸೇರಿವೆ. ಬಿಲ್ವದ ಬೇರು ಮತ್ತು ಹಣ್ಣುಗಳಲ್ಲಿ , ಅಂಬೆಲಿಫೆರೋನ್, ಮಾರ್ಮೆಸಿನ್ ನಂತಹ ರಾಸಾಯನಿಕಗಳಿವೆ. ಬಿಲ್ವದ ಎಲೆಯಲ್ಲಿ ಚಂಚಲ ತೈಲವಿದೆ. ಬಿಲ್ವದ ಮರದ ತೊಗಟೆಯಲ್ಲಿ ಎಜಿಲಿನ್, ಅಂಬೆಲಿಫೆರೋನ್, ಮಾರ್ಮಿಸಿನ್ ಇವೆ. ಬಿಲ್ವದ ಹಣ್ಣಿನ ತಿರುಳಿನಲ್ಲಿ ೬೧.೫% ತೇವಾಂಶ, ೧.೮% ಪ್ರೋಟೀನ್, 0.೩% ಕೊಬ್ಬು, ೧.೭% ಖನಿಜಗಳು, ೨.೯% ನಾರು, ೩೧.೮% ಕಾರ್ಬೋಹೈಡ್ರೇಟ್, ಕ್ಯಾಲ್ಸಿಯಂ, ರಂಜಕ ಮತ್ತು ಕಬ್ಬಿಣ ಇದೆ. ಕ್ಯಾರೋಟಿನ್, ಥಯಾಮಿನ್, ರೈಬೋವಿನ್, ನಿಯಾಸಿನ್ ಮತ್ತು 'ಸಿ' ಜೀವಸತ್ವ ಇದೆ.

## ಬಿಲ್ವದ ಔಷಧೀಯ ಗುಣಧರ್ಮಗಳು

ಬಿಲ್ವಪತ್ರೆಗೆ ಮಧುಮೇಹ, ಕಣ್ಣಿನ ಬೇನೆಗಳು ಮುಂತಾದ ರೋಗಗಳನ್ನು ಕಡಿಮೆಮಾಡುವ ಆಂಟಿವೈರಲ್, ಆಂಟಿಫಂಗಸ್ ಗುಣಗಳು ಇದಕ್ಕಿವೆ. ಅಲ್ಲದೇ ಚರ್ಮರೋಗಗಳು, ಆಸ್ತಮಾ, ಜೀರ್ಣಾಂಗ ಸಮಸ್ಯೆಗಳು, ಜ್ವರ, ಮುಂತಾದ ಅಸಾಧ್ಯ ರೋಗಗಳಿಗೆ ಗುಣಮಾಡುವ ಸಾಮರ್ಥ್ಯವಿದೆ. ಸರ್ವರೋಗನಿವಾರಿಣಿ. ಇದರ ಕಾಯಿಯೊಳಗಣ ಅಂಟನ್ನು ಗೋಂದಾಗಿ ಉಪಯೋಗಿಸುತ್ತಾರೆ. ಬೀಜಗಳನ್ನು ತಿನ್ನುತ್ತಾರೆ. ಸೋಡಿಯಂ, ಪೊಟ್ಯಾಶಿಯಂ, ಕ್ಯಾಲ್ಸಿಯಂ, ಲೋಹ, ರಂಜಕ, ಸಿಲಿಕಾ ಅಂಶಗಳು ಹೇರಳವಾಗಿದ್ದು ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಿವೆ. ಅತಿಸಾರ, ಜ್ವರ, ಮೂತ್ರ ಸಂಬಂಧಿತ ರೋಗಗಳಿಗೆ ಬಿಲ್ವಪತ್ರೆ ಸಿದ್ಧೌಷಧಿ. ಇದು ಉಷ್ಣಗುಣ ಹೊಂದಿರುವ ಕಾರಣ, ಜೀರ್ಣಕ್ರಿಯೆ ಹೆಚ್ಚಿಸುತ್ತದೆ. ಬಿಲ್ವದ ಹಣ್ಣಿನಿಂದ ಪಾನಕ ಮಾಡಿ ಕುಡಿಯುತ್ತ ಬಂದರೆ ಬೊಜ್ಜು ಕರಗುತ್ತದೆ. ಕಣ್ಣಿನ ಕಾಯಿಲೆಗಳು, ಕಿವುಡತನದ ಸಮಸ್ಯೆಗಳಿಗೂ ಇದು ಪರಿಹಾರ ಒದಗಿಸುತ್ತದೆ. ಬಿಲ್ವದ ಲೇಹ್ಯ ಸೇವಿಸುವುದರಿಂದ ಗ್ಯಾಸ್ಟ್ರಿಕ್ ತೊಂದರೆ ನಿವಾರಣೆಯಾಗುತ್ತದೆ. ಬಿಲ್ವಪತ್ರೆಯ ತಂಬುಳಿ ಸೇವಿಸಿದರೆ ಆರೋಗ್ಯ ವೃದ್ಧಿಸುತ್ತದೆ. ಇಷ್ಟೊಂದು ಮಹತ್ವವಿರುವ ಬಿಲ್ವವೃಕ್ಷವನ್ನು ದೇವಸ್ಥಾನಗಳಲ್ಲಿ ಪೂಜೆ, ಪ್ರದಕ್ಷಿಣೆ ಮಾಡುವುದರೊಂದಿಗೇ ಮನೆಮುಂದೆ ತೋಟಗಳಲ್ಲಿ ಹೊಲಗಳಲ್ಲಿ ನೆಟ್ಟು ಬೆಳೆಸೋಣ. ★

ವ್ಯಕ್ತಿ ವಿಶೇಷ ಮಾಲಿಕೆ

# ಕಮಲಾದೇವಿ ಚಟ್ಟೋಪಾಧ್ಯಾಯ

ಕೆ ಜನಾರ್ದನ ತುಂಗ



ಎಂಟನೆಯ ವಯಸ್ಸಿಗೆ ತಂದೆಯ ಮರಣ, ಹದಿನಾಲ್ಕನೆಯ ವಯಸ್ಸಿಗೆ ಮದುವೆ, ಹದಿನಾರನೆಯ ವಯಸ್ಸಿಗೆ ಪತಿಯ ಮರಣ, ವಿಧವೆಯ ಪಟ್ಟ. ಪಡೆದ ಅಲ್ಪ ವಿದ್ಯಾಭ್ಯಾಸವೇನಿದ್ದರೂ ಮನೆಯಲ್ಲಿಯೇ. ಇಂತಹ ಕಠಿಣ ಪರಿಸ್ಥಿತಿಯನ್ನು ಎದುರಿಸಿದ ಬಾಲೆಯ ಭವಿಷ್ಯ ಕತ್ತಲೆಯಲ್ಲಿಯೇ ಕಳೆದು ಹೋಗುವುದು ಸಹಜವಾಗಿತ್ತು, ಕಳೆದ ಶತಮಾನದ ಆದಿಭಾಗದಲ್ಲಿ. ಇಂತಹ ಪ್ರತಿಕೂಲ ಪರಿಸ್ಥಿತಿಯ ಕೆಸರಿನಿಂದ ಮೇಲೆದ್ದು ಅರಳಿದ ಕಮಲ, ಕಮಲಾದೇವಿಯವರು 1966 ರಲ್ಲಿ ವಿಶ್ವದ ಅತ್ಯುನ್ನತ ಪ್ರಶಸ್ತಿಗಳಲ್ಲೊಂದಾದ ರೇಮನ್ ಮ್ಯಾಗ್ಸೇಸೆ ಪ್ರಶಸ್ತಿಗೆ ಪಾತ್ರರಾದರು. 1987 ರಲ್ಲಿ ದೇಶದ ಎರಡನೆಯ ಅತ್ಯುನ್ನತ ನಾಗರಿಕ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿಯಿಂದ ಸನ್ಮಾನಿತರಾದ ಅವರಿಗೆ 1955 ರಲ್ಲಿಯೇ ಪದ್ಮಭೂಷಣ ಪ್ರಶಸ್ತಿಯೂ ದೊರೆತಿತ್ತು. 1974 ರಲ್ಲಿ ಸಂಗೀತ ನಾಟಕ ಅಕಾಡೆಮಿಯ ಫೆಲೋಶಿಪ್ ಕೂಡ ಲಭಿಸಿತ್ತು. ಇದನ್ನು ಮಾನವ ಸಾಧನೆಯ ವಿಸ್ಮಯ ಎಂದೇ ಪರಿಗಣಿಸಬಹುದು.

ಕಮಲಾದೇವಿಯವರು ಮಂಗಳೂರಿನ ಜಿಲ್ಲಾ ಕಲೆಕ್ಟರ್ ಆಗಿದ್ದ ಅನಂತಯ್ಯ ಧಾರೇಶ್ವರ ಮತ್ತು ಗಿರಿಜಾ ಬಾಯಿಯವರ ನಾಲ್ಕನೆಯ ಮತ್ತು ಕೊನೆಯ ಮಗಳಾಗಿ ದಿನಾಂಕ 03/04/1903 ರಂದು ಜನಿಸಿದರು. ಪ್ರಾರಂಭಿಕ ಹಂತದಲ್ಲಿ ಮನೆಯಲ್ಲಿಯೇ ಶಿಕ್ಷಣ ಪಡೆದರು. ಸಂಪ್ರದಾಯಸ್ಥ ಚಿತ್ರಾಪುರ ಸಾರಸ್ವತ ಬ್ರಾಹ್ಮಣ ಮನೆತನದಲ್ಲಿ ಜನಿಸಿಯೂ ಮಹಿಳೆಯರ ಶಿಕ್ಷಣದ ಕುರಿತು ಹೋರಾಟ ನಡೆಸಿ ಯಶಸ್ವಿಯಾದರು. ಪತಿಯನ್ನು ಕಳೆದುಕೊಂಡ ಮೇಲೆ, ತಾವೇ ಸ್ವತಃ ಮಂಗಳೂರಿನ ಕ್ಯಾಥೋಲಿಕ್ ಕಾನ್ವೆಂಟ್ ಮತ್ತು ಮದ್ರಾಸಿನ ಸೇಂಟ್ ಮೇರೀಸ್ ಕಾಲೇಜಿನಲ್ಲಿ ಅಧ್ಯಯನ ನಡೆಸಿದರು. ಮದ್ರಾಸಿನಲ್ಲಿ ಓದುತ್ತಿದ್ದಾಗ ಅವರಿಗೆ ಸುಹಾಸಿನಿ ಚಟ್ಟೋಪಾಧ್ಯಾಯ ಅವರ ಪರಿಚಯವಾಯಿತು. ಸುಹಾಸಿನಿ ಚಟ್ಟೋಪಾಧ್ಯಾಯರ ಸಹೋದರ ಹರೀಂದ್ರನಾಥ ಚಟ್ಟೋಪಾಧ್ಯಾಯರು ಅಂದಿನ ದಿನಗಳಲ್ಲಿ ಮದ್ರಾಸಿನ ರಂಗಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ಜೊತೆ ಸಂಗೀತ, ನಾಟಕ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಕೆಲಸ ಮಾಡಲು ತೊಡಗಿದ ನಂತರ ಅವರನ್ನೇ ಮದುವೆಯಾದರು. ಅದು ಸಮಾಜವನ್ನು ಧಿಕ್ಕರಿಸಿ ನಡೆದ ಅಪರೂಪದ ವಿಧವಾ ವಿವಾಹವಾಗಿತ್ತು. ಕಮಲಾದೇವಿಯವರು ನಂತರ ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿ ಕನ್ನಡದ ಮೂಕಿ ಮೃಚ್ಛಕಟಿಕಾ ಮತ್ತು ಅನೇಕ ಹಿಂದಿ ಚಲನಚಿತ್ರಗಳಲ್ಲಿ ನಟಿಸಿದರು.

ಮರುಮದುವೆಯಾದ ಮೇಲೆ ಪತಿಯ ಜೊತೆ ಲಂಡನ್ನಿಗೆ ತೆರಳಿ ಅಲ್ಲಿನ ಬೆಡ್ಫೋರ್ಡ್ ಕಾಲೇಜಿನಲ್ಲೂ ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ನಲ್ಲಿಯೂ ವಿದ್ಯಾಭ್ಯಾಸ ಮುಂದುವರಿಸಿದರು. ಈ ಹಂತದಲ್ಲಿ ಅವರು ಅಂತಾರಾಷ್ಟ್ರೀಯ ಮಟ್ಟದ ಮಹಿಳಾ ಹಕ್ಕುಗಳ ಹೋರಾಟಗಾರರ ಸಂಪರ್ಕಕ್ಕೆ ಬಂದರು. ಮುಂದೆ ಅವರು ಅಂತಾರಾಷ್ಟ್ರೀಯ ಸ್ತ್ರೀವಾದಿ ಚಳವಳಿಯ ಪ್ರಮುಖ ವ್ಯಕ್ತಿಯಾಗಿ ಗುರುತಿಸಲ್ಪಟ್ಟರು. 1929 ರಲ್ಲಿ ಬರ್ಲಿನ್ ನಗರದಲ್ಲಿ ನಡೆದ ಇಂಟರ್ನ್ಯಾಷನಲ್ ಅಲಯನ್ಸ್ ಆಫ್ ವಿಮೆನ್ ಸಮ್ಮೇಳನದಲ್ಲಿಯೂ ಭಾಗವಹಿಸಿದರು. ಅವರು ಜನಾಂಗದ್ವೇಷದ ವಿರುದ್ಧ ಮತ್ತು ದೇಶ ದೇಶಗಳ ನಡುವಣ ಆರ್ಥಿಕ ತಾರತಮ್ಯಗಳ ವಿರುದ್ಧ ದನಿ ಎತ್ತಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಕಮಲಾದೇವಿಯವರ ಪಾತ್ರ ಅವಿಸ್ಮರಣೀಯ. ಅವರ ಸೋದರ ಮಾವ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾಗಿದ್ದರು. ಅವರ ತಂದೆಯನ್ನು ಭೇಟಿಯಾಗಲು ಬರುತ್ತಿದ್ದ ಅನೇಕ ಸ್ವಾತಂತ್ರ್ಯಹೋರಾಟಗಾರರ ಪರಿಚಯ ಅವರಿಗಾಯಿತು. ಅವರಲ್ಲಿ ಶ್ರೀ ಗೋಪಾಲಕೃಷ್ಣ ಗೋಖಲೆ, ಮಹಾದೇವ ರಾನಡೆ, ರಮಾಬಾಯಿ, ಡಾ. ಅನ್ನಿ ಬೆಸೆಂಟ್, ತೇಜಬಹಾದುರ್ ಸಪ್ರು, ಶ್ರೀನಿವಾಸ ಶಾಸ್ತ್ರಿ ಮುಂತಾದ ಪ್ರಮುಖರೂ ಸೇರಿಕೊಂಡಿದ್ದರು.

ಸೇವಾದಳದ ಮೂಲಕ ಅನೇಕ ಸಾಮಾಜಿಕ ಕಾರ್ಯಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು. ಸ್ತ್ರೀ ಸಮಾನತೆಯ ವಿಷಯದಲ್ಲಿ ಗಾಂಧೀಜಿಯವರ ಜೊತೆಯೇ ಭಿನ್ನಾಭಿಪ್ರಾಯ ಹೊಂದಿದ ವೈಚಾರಿಕ ನಿಲುವು ಅವರದ್ದು. ಉಪ್ಪಿನ ಸತ್ಯಾಗ್ರಹದಲ್ಲಿ ಮಹಿಳೆಯರು ಭಾಗವಹಿಸುವುದು ಬೇಡ ಎಂಬ ಗಾಂಧೀಜಿಯವರ ನಿಲುವನ್ನು ಪ್ರಶ್ನಿಸಿ ಮುಂಬಯಿಯಲ್ಲಿ ತಾವೇ ಉಪ್ಪು ತಯಾರಿಸಿ ಜೈಲುಶಿಕ್ಷೆಯನ್ನು ಅನುಭವಿಸಿದರು. ಅಸಹಕಾರ ಚಳವಳಿಯಲ್ಲಿ ನೇರವಾಗಿ ಭಾಗವಹಿಸಿದ ಅವರು ಯರವಾಡಾ, ಬೆಳಗಾವಿ ಮತ್ತು ವೆಲ್ಲೂರುಗಳಲ್ಲಿ ಜೈಲು ಶಿಕ್ಷೆ ಅನುಭವಿಸಿದರು. ನೃತ್ಯ, ಜಾನಪದ ಕಲೆ, ಮುಷಾಯಿರಾ ಮುಂತಾದ ಕಲೆಗಳ ಮೂಲಕ ಯುವಕರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸೆಳೆದರು.

1926 ರಲ್ಲಿಯೇ ಮದ್ರಾಸು ಪ್ರಾಂತೀಯ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಮದ್ರಾಸಿನಿಂದಲೇ ಸ್ಪರ್ಧಿಸಿ ಕೇವಲ 55 ಮತಗಳಿಂದ ಪರಾಜಿತರಾದರು. ಮುಂದೆ 1936 ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದಾಗ ಜಯಪ್ರಕಾಶ ನಾರಾಯಣ, ರಾಮ ಮನೋಹರ ಲೋಹಿಯಾ, ಮತ್ತು ಮಿನೂ ಮಸಾನಿ ಮುಂತಾದ ಪ್ರಸಿದ್ಧರ ಜೊತೆ ಕೆಲಸ ಮಾಡುವ ಅವಕಾಶ ಅವರಿಗೆ ದೊರೆಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಎಲ್ಲ ದೇಶಗಳ ಬೆಂಬಲವನ್ನು ಪಡೆಯಲು ಜಾಗತಿಕ ಪ್ರವಾಸ ಕೈಗೊಂಡರು.

ಸ್ವಾತಂತ್ರ್ಯಾನಂತರ ದೇಶವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದ ನಿರಾಶ್ರಿತರ ಪುನರ್ವಸತಿಗಾಗಿ ಕೆಲಸ ಮಾಡಿದರು. ಇದೇ ಸಂದರ್ಭದಲ್ಲಿ ಭಾರತೀಯ ಸಹಕಾರಿ ಒಕ್ಕೂಟದ ಸ್ಥಾಪಕ ನಾಯಕಿಯಾಗಿದ್ದ ಅವರು ಪಾಕಿಸ್ತಾನದ ವಾಯವ್ಯ ಗಡಿನಾಡು ಪ್ರಾಂತ್ಯದಿಂದ ಭಾರತಕ್ಕೆ ವಲಸೆ ಬಂದ ಸುಮಾರು ಐವತ್ತು ಸಾವಿರ ಪಠಾಣರಿಗೆ ಅಂದು ಸಣ್ಣ ಹಳ್ಳಿಯಾಗಿದ್ದ ಫರೀದಾಬಾದಿನಲ್ಲಿ ಪುನರ್ವಸತಿ ಸೌಕರ್ಯ ಕಲ್ಪಿಸಿಕೊಟ್ಟರು. ಅವರ ಪರಿಶ್ರಮದಿಂದ 1950 ರಲ್ಲಿ ಫರೀದಾಬಾದ್ ಲಘು ಉದ್ಯಮಗಳ ಪ್ರಮುಖ ಕೇಂದ್ರವಾಗಿ ಪರಿಗಣಿತವಾಗಿ ಇಂದು ದೇಶದ ಪ್ರಮುಖ ಕೈಗಾರಿಕಾ ನಗರಗಳಲ್ಲೊಂದಾಗಿ ಬೆಳೆದಿದೆ.

ಕಮಲಾದೇವಿಯವರು ಮಹಿಳಾ ಕಾರ್ಮಿಕ ಸಂಘಟನೆಯನ್ನೂ ಮಾಡಿದರು. ದೇಶದ ಅನೇಕ ಕಾರ್ಮಿಕ ಸಂಘಟನೆಗಳಿಗೆ ನೇತೃತ್ವ ನೀಡಿ ಕಾರ್ಮಿಕರ ಹಿತರಕ್ಷಣೆಗಾಗಿ ದುಡಿದರು. ಕೃಷಿಕ್ಷೇತ್ರದ ಸಮಸ್ಯೆಗಳ ಕಡೆ ಗಮನ ಹರಿಸಿದ ಅವರು ಜಮೀನ್ದಾರಿ ಪದ್ಧತಿಯ ನಿರ್ಮೂಲನೆಗಾಗಿ ಶ್ರಮಿಸಿದರು.

ಇಷ್ಟೆಲ್ಲ ಸಾಮಾಜಿಕ ಮತ್ತು ರಾಜಕೀಯ ಕೆಲಸಗಳನ್ನು ಮಾಡಿದ್ದರೂ ಅವರನ್ನು ನಾವು ನೆನೆಯುವುದು ಅವರು ಕಲೆ ಮತ್ತು ಸಂಸ್ಕೃತಿಗಳ ಕ್ಷೇತ್ರದಲ್ಲಿ ಮಾಡಿದ ಕೆಲಸಕ್ಕಾಗಿ. ಸಂಗೀತ, ನೃತ್ಯ, ನಾಟಕ, ಕರಕುಶಲ ವಿದ್ಯೆ, ಜಾನಪದ ಮುಂತಾದ ಅನೇಕ ವಲಯಗಳಿಗೆ ಅವರ ಕೊಡುಗೆ ಅಪಾರ. ಈ ನಿಟ್ಟಿನಲ್ಲಿ ಅವರು ಅನೇಕ ಸಂಸ್ಥೆಗಳನ್ನು ಪ್ರಾರಂಭಿಸಿದರು. 1944 ರಲ್ಲಿ ಅವರು ಪ್ರಾರಂಭಿಸಿದ ಇಂಡಿಯನ್ ನ್ಯಾಷನಲ್ ಥಿಯೇಟರ್ ಇಂದು ರಾಷ್ಟ್ರೀಯ ನಾಟಕ ಶಾಲೆ ಎಂದು ಪ್ರಸಿದ್ಧವಾಗಿದೆ. ಚೆನ್ನೈ ನಗರದ ಕ್ರಾಫ್ಟ್ ಕೌನ್ಸಿಲ್ ಆಫ್ ಇಂಡಿಯಾ ಇವರದೇ ಕಲ್ಪನೆಯ ಕೂಸು. ಸಂಗೀತ ಮತ್ತು ನಾಟಕ ಅಕಾಡೆಮಿ, ಭಾರತೀಯ ಕರಕುಶಲ ನಿಗಮ ಮತ್ತು ಕೇಂದ್ರೀಯ ಗೃಹಕೈಗಾರಿಕಾ ಸಂಸ್ಥೆಗಳ ಸ್ಥಾಪನೆಯ ಹಿಂದಿನ ಪ್ರೇರಕ ಶಕ್ತಿ ಇವರೇ.

ಅಖಿಲ ಭಾರತ ಕಾಂಗ್ರೆಸ್ ಸಮಿತಿ, ಅಖಿಲ ಭಾರತ ಮಹಿಳಾ ಸಮ್ಮೇಳನ, ಭಾರತೀಯ ಸಹಕಾರ ಯೂನಿಯನ್, ಜಾಗತಿಕ ಕರಕುಶಲ ಮಂಡಳಿ, ಅಖಿಲ ಭಾರತ ವಿನ್ಯಾಸ ಕೇಂದ್ರ, ಅಖಿಲ ಭಾರತ ಕರಕುಶಲ ಮಂಡಳಿ ಮುಂತಾದ ಅನೇಕ ಸಂಸ್ಥೆಗಳು ಕಮಲಾದೇವಿಯವರ ಸೇವೆಯನ್ನು ಪಡೆದವು. ಉತ್ತಮ ಬರಹಗಾರರಾಗಿದ್ದ ಅವರು ಅನೇಕ ಲೇಖನಗಳು ಮತ್ತು ಪುಸ್ತಕಗಳನ್ನೂ ಬರೆದಿದ್ದಾರೆ.

ಭಾರತದಲ್ಲಿ ನೃತ್ಯ, ನಾಟಕ, ಸಂಗೀತ, ಕಲೆ, ಗೊಂಬೆಯಾಟ ಮುಂತಾದ ಪ್ರಕಾರಗಳಿಗೆ ಮರುಜನ್ಮ ನೀಡಿದ, ಜಾನಪದ ಮತ್ತು ಕುಶಲಕಲೆಗಳನ್ನು ಪ್ರೋತ್ಸಾಹಿಸಿದ, ಶಿಕ್ಷಣ ಮತ್ತು ರಾಜಕೀಯ ಕ್ಷೇತ್ರದಲ್ಲಿ ತನ್ನದೇ ಗುರುತುಗಳನ್ನು ದಾಖಲಿಸಿದ, ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡಿದ, ಸ್ತ್ರೀ ಸಮಾನತೆಯ ಪರವಾಗಿ ದನಿಯೆತ್ತಿದ, ನಿರಾಶ್ರಿತರಿಗೆ ಆಸರೆಯಾದ, ದೇಶದ ಅಗ್ರ ಸ್ಥಾನೀಯ ಸ್ವಾತಂತ್ರ್ಯ ಹೋರಾಟಗಾರರ ಸಾಲಿನಲ್ಲಿ ಸ್ಥಾನ ಪಡೆದ ಕಮಲಾ ದೇವಿ ಚಟ್ಟೋಪಾಧ್ಯಾಯರು 29/10/1988 ರಲ್ಲಿ ಮುಂಬಯಿಯಲ್ಲಿ ನಿಧನರಾದರು.

ಇವರು ಕನ್ನಡಿಗರೆಂಬುದೇ ನಮ್ಮ ಹೆಮ್ಮೆ! ★

# ಅದಮ್ಯಚೇತನ ತಿಂಗಳ ವರದಿ

(15.02.2022 - 15.03.2022)

## ಅಭಿನಂದನೆ- ಪ್ರಶಸ್ತಿ ಪ್ರದಾನ

ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಹುಟ್ಟುಹಬ್ಬದಂದು (ಮಾರ್ಚ್ 11) ಅದಮ್ಯ ಚೇತನದ ಕಾರ್ಯಕರ್ತರೂ ಸಿಬ್ಬಂದಿಯವರೂ ಅವರಿಗೆ ಶುಭಹಾರೈಸಿದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ (ಮಾರ್ಚ್ 8) ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿಯವರ ಸಮಾಜಸೇವೆ, ಸಾಧನೆಗಳನ್ನು ಗುರುತಿಸಿ ಪಬ್ಲಿಕ್ ಟಿ ವಿ ವತಿಯಿಂದ ಅವರಿಗೆ ನಾರಿ ನಾರಾಯಣಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

## ಪುಸ್ತಕ ಬಿಡುಗಡೆ

ಕರ್ನಾಟಕದಲ್ಲಿ ಕೋವಿಡ್-19 ರ ವಿರುದ್ಧದ ಹೋರಾಟದ ಕಥೆಗಳ ಬಗ್ಗೆ ನಟಿ ಪ್ರಣಿತಾ ಸುಭಾಷ್ , ಐಶ್ವರ್ಯಾ ಅನಂತಕುಮಾರ್, ಶರಣ್ ಸೆಟ್ಟಿ ಅವರ ಸಂಪಾದಕತ್ವದ ಲೇಖನಗಳ ಸಂಕಲನವಾದ 'ಕಾರ್ಮೋಡಗಳ ನಡುವೆ' ಎಂಬ ಪುಸ್ತಕವನ್ನು 19 ಫೆಬ್ರವರಿ 2022 ರಂದು ಮುಖ್ಯಮಂತ್ರಿಗಳ ಗೃಹ ಕಛೇರಿಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಡಾ. ತೇಜಸ್ವಿನಿ ಅನಂತಕುಮಾರ್, ಐಶ್ವರ್ಯಾ ಅನಂತಕುಮಾರ್, ಡಾ. ಕೆ. ಉಲ್ಲಾಸ ಕಾರಂತ, ಕೃತಿ ಕಾರಂತ , ಚಿತ್ರನಟಿ ಸಂಯುಕ್ತಾ ಹೊರನಾಡ್, ರಂಗಕರ್ಮಿ ಅಭಿಷೇಕ್ ಅಯ್ಯಂಗಾರ್ ಹೊಸದಿಗಂತ ಪತ್ರಿಕೆಯ ಸಂಪಾದಕರಾದ ವಿನಾಯಕ ಭಟ್ ಮೂರೂರು ಮೊದಲಾದವರು ಹಾಜರಿದ್ದರು.



## ಗಣ್ಯರ ಭೇಟಿ

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರೂ ಶಿವಗಂಗಾ ಸಂಸ್ಥೆಯ ಸ್ಥಾಪಕರೂ ಆದ ಶ್ರೀ ಮಹೇಶ್ ಶರ್ಮರವರು 5 ಮಾರ್ಚ್ 2022ರಂದು ಅದಮ್ಯ ಚೇತನಕ್ಕೆ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಶ್ರೀ ಶ್ರೀಕಾಂತ ಬೆಟಗೇರಿ, ಶ್ರೀ ಪ್ರಕಾಶ್ ಮೊದಲಾದವರು ಉಪಸ್ಥಿತರಿದ್ದರು. ಮಲ್ಲೇಶ್ವರಂ ದೇವಿ ಗ್ರೂಪ್ ಭಜನಾ ಮಂಡಳಿಯ ಸದಸ್ಯರು ಇತ್ತೀಚೆಗೆ ಅದಮ್ಯ ಚೇತನಕ್ಕೆ ಭೇಟಿನೀಡಿ ಗೀತಾ ಪಠಣ ಮತ್ತಿತರ ಚಟುವಟಿಕೆಗಳಲ್ಲಿ ಪಾಲ್ಗೊಂಡರು.

## ಶ್ರೀ ಚೇತನ

ಶ್ರೀ ಚೇತನ ಆನ್ ಲೈನ್ ಕಾರ್ಯಕ್ರಮಗಳು ಪ್ರತಿ ಮಂಗಳವಾರದಂದು ನಡೆಯುತ್ತಿದ್ದು ಪ್ರತಿ ವಾರ ದೇಶಭಕ್ತಿ ಗೀತೆ, ಮಂಕುತಿಮ್ಮನ ಕಗ್ಗ ವಾಚನ, ಔಷಧೀಯ ಸಸ್ಯ ಪರಿಚಯ, ಆರೋಗ್ಯ ಅಡುಗೆ ಮೊದಲಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಗುತ್ತಿದೆ.

## ಗೀತಾಪಠಣ

ಅದಮ್ಯ ಚೇತನದಲ್ಲಿ ಪ್ರತಿ ಗುರುವಾರ ಸಂಜೆ ನಡೆಯುವ ಒಂದು ಗಂಟೆಯ ಅವಧಿಯ ಗೀತಾಪಠಣ ಕಾರ್ಯಕ್ರಮವು ಮುಂದುವರಿಯುತ್ತಿದೆ. ಭಗವದ್ಗೀತೆಯ ಪಠಣದ ನಂತರ ಕಾರ್ಯಕರ್ತರು ತರಕಾರಿ ಹೆಚ್ಚುವ ಕೆಲಸದಲ್ಲಿ ಕೈಜೋಡಿಸುವ ಮೂಲಕ ಅದಮ್ಯಚೇತನದ ಅಡುಗೆಮನೆಯ ಕಾರ್ಯದಲ್ಲಿ ನೆರವಾಗುತ್ತಿದ್ದಾರೆ.

3 ಮಾರ್ಚ್ 2022ರಂದು ನಡೆದ ಗೀತಾಪಠಣ ಕಾರ್ಯಕ್ರಮದಲ್ಲಿ ಅನಂತಕುಮಾರರ ಬಂಧುಗಳೂ ಅಮೇರಿಕಾ ನಿವಾಸಿಗಳೂ ಆದ ಡಾ. ಉಷಾ ಸತೀಶ್ ಮತ್ತು ಕುಟುಂಬದವರು ಭಾಗವಹಿಸಿದ್ದರು. ಅವರೊಡನೆ ಶ್ರೀಮತಿ ತೇಜಸ್ವಿನಿಯವರೂ ಅದಮ್ಯಚೇತನದ ಟ್ರಸ್ಟಿಗಳಾದ ಶ್ರೀ ನಂದಕುಮಾರ್, ಶ್ರೀಮತಿ ಭಾರತಿ ನಂದಕುಮಾರ್, ಶ್ರೀಮತಿ ಸುವಾಸಿನಿ ನಾರಾಯಣ್ ಮೊದಲಾದವರೂ ಪಾಲ್ಗೊಂಡಿದ್ದರು.

## ನಿತ್ಯ ಅನ್ನದಾನ ಮತ್ತು ಶಾಲಾಮಕ್ಕಳಿಗೆ ಊಟ

ಅದಮ್ಯಚೇತನದ ವತಿಯಿಂದ ನಿತ್ಯ ಅನ್ನದಾನ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಿದ್ದು, ಗವಿಪುರ, ನಗರ್ತಪೇಟೆ, ಮಾರೇನಹಳ್ಳಿ, ಜಯನಗರ ಮೊದಲಾದ ಕಡೆಗಳಲ್ಲಿ ಅಗತ್ಯವಿರುವ ಜನರು ರುಚಿಕರವಾದ ಭೋಜನಸೌಲಭ್ಯವನ್ನು ಪಡೆಯುತ್ತಿದ್ದಾರೆ. ಅದಮ್ಯ ಚೇತನವು ಪ್ರತಿ ನಿತ್ಯ ಬೆಂಗಳೂರಿನ 300 ಕೇಂದ್ರಗಳ ಮೂಲಕ ಪ್ರತಿದಿನ ಹದಿನಾಲ್ಕು ಸಾವಿರ ಪೌರಕಾರ್ಮಿಕರಿಗೆ ಆಹಾರವನ್ನು ಪೂರೈಸುವ ಬೃಹತ್ ಯೋಜನೆಯನ್ನು ಯಶಸ್ವಿಯಾಗಿ ನಡೆಸುತ್ತಿದೆ. ಬೆಂಗಳೂರಿನ 256 ಶಾಲೆಗಳ ಐವತ್ತು ಸಾವಿರ ಮಕ್ಕಳಿಗೆ ಪ್ರತಿನಿತ್ಯ ಬಿಸಿಊಟ ನೀಡುವ ಬೃಹತ್ ಯೋಜನೆಯನ್ನು ಅದಮ್ಯಚೇತನ ನಿರ್ವಹಿಸುತ್ತಿದೆ. ಅಲ್ಲದೆ, ವಾರದ ಐದು ದಿನ ಮಕ್ಕಳಿಗೆ ಬೆಳಗಿನ ಹೊತ್ತು ಕುಡಿಯಲು ಹಾಲು ನೀಡಲಾಗುತ್ತಿದೆ.

## ದೇಗುಲ ದರ್ಶನ ಕಾರ್ಯಕ್ರಮ

ನಾಡಿನ ಎಲ್ಲೆಡೆ ಇರುವ ಅಜ್ಞಾತ ಮತ್ತು ಪುರಾತನ ದೇವಾಲಯಗಳನ್ನು ಜನರಿಗೆ ಪರಿಚಯಿಸಿ, ನಮ್ಮ ಪರಂಪರೆಯ ವೈಭವವನ್ನು ಕುರಿತು ಜಾಗ್ರತಿ ಮೂಡಿಸುವ ಸಲುವಾಗಿ ಅದಮ್ಯ ಚೇತನವು ಹಮ್ಮಿಕೊಂಡಿರುವ ದೇಗುಲ ದರ್ಶನ ಕಾರ್ಯಕ್ರಮವು ಜನಪ್ರಿಯವಾಗಿದೆ. ಈ ಯೋಜನೆಯ ಅಂಗವಾಗಿ ಇತ್ತೀಚೆಗೆ ಹಾಸನ ಜಿಲ್ಲೆಯ ಹಳೇಬೀಡು, ಹಾರನಹಳ್ಳಿ, ಅಡಗೂರು, ಬೇಲೂರು, ಪುಷ್ಪಗಿರಿ, ನರಸೀಪುರ, ಕೊಂಡಜ್ಜಿ, ಶಾಂತಿಗ್ರಾಮ ಮೊದಲಾದ ದೇವಾಲಯಗಳಿಗೆ ಭೇಟಿ ನೀಡಲಾಯಿತು. ಅದಮ್ಯ ಚೇತನದ ಪರವಾಗಿ ದೇಗುಲ ದರ್ಶನ ತಂಡದ ಸದಸ್ಯರು ಆಯಾ ದೇವಾಲಯದ ಅರ್ಚಕರನ್ನು ಗೌರವಿಸಿದರು.

## ಹಸಿರು ಭಾನುವಾರ

ಅದಮ್ಯ ಚೇತನದ ಹಸಿರು ಭಾನುವಾರ ಕಾರ್ಯಕ್ರಮ ಇದೀಗ (20 ಮಾರ್ಚ್ 2022) 325ನೇ ವಾರಕ್ಕೆ ಕಾಲಿರಿಸಿದೆ. ಶ್ರೀ ಅನಂತಕುಮಾರ್ ಅವರು ಸಸ್ಯಾಗ್ರಹದ ಅಂಗವಾಗಿ ಶುಭಾರಂಭಮಾಡಿದ ಈ ಯೋಜನೆಯು ಹೀಗೆ ನಿರಂತರವಾಗಿ ಮುಂದುವರಿದು ಬಂದಿರುವುದು ಸಂಭ್ರಮದ ಸಂಗತಿಯೇ ನಿಜ. 320ನೇ ಹಸಿರು ಭಾನುವಾರ ಕಾರ್ಯಕ್ರಮವು ಬೆಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಜರುಗಿತು; 321ನೇ ಕಾರ್ಯಕ್ರಮವು ದೊಡ್ಡ ಆಲದ ಮರದ ಸಮೀಪ ನಡೆದರೆ, 322ನೇ ಹಸಿರು ಭಾನುವಾರ ಎನ್ ಜಿ ಇ ಎಫ್ ಲೇ ಔಟ್, ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ನಡೆಯಿತು. 323ನೇ ಕಾರ್ಯಕ್ರಮವನ್ನು ಕಳೆದ ಮಾರ್ಚ್ 6ರಂದು ಕೆಂಪಾಂಬುಧಿ ಕೆರೆಯ ಸಮೀಪದಲ್ಲಿ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು. ದಿನಾಂಕ 13 ಮಾರ್ಚ್ 2022ರಂದು ನಡೆದ 324ನೇ ಹಸಿರು ಭಾನುವಾರದಂದು ಕಾರ್ಯಕರ್ತರು ಬೆಂಗಳೂರು ವಿಶ್ವವಿದಾಲಯದ ಆವರಣದಲ್ಲಿ ಅನೇಕ ಸಸಿಗಳನ್ನು ನೆಟ್ಟರು. ಅದರ ಜೊತೆಗೆ ಹಸಿರು ಭಾನುವಾರದ ಅಂಗವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಈಗಾಗಲೇ ನೆಟ್ಟಿರುವ ಸಾವಿರಾರು ಗಿಡಗಳಿಗೆ ನೀರೆರೆಯುವುದಲ್ಲದೆ, ತೇವವನ್ನು ಕಾಪಾಡುವ ಸಲುವಾಗಿ ಪ್ರತಿ ಸಸ್ಯದ ಬುಡದಲ್ಲಿ ತರಗೆಲೆಗಳನ್ನು ಹರಡುವ ಚಟುವಟಿಕೆಯನ್ನೂ ಹಮ್ಮಿಕೊಳ್ಳಲಾಗಿತ್ತು. ಇಂತಹ ಎರಡು ಕಾರ್ಯಕ್ರಮಗಳನ್ನು ಡಾ. ಜಯಶೀಲಾರವರ ನೇತೃತ್ವದಲ್ಲಿ ಅನೇಕ ವೈದ್ಯರನ್ನು ಒಳಗೊಂಡಿದ್ದ ತಂಡದವರು ನಿರ್ವಹಿಸಿದರು. ಬೆಂಗಳೂರಿನ ವಿಜಯನಗರದ ಇಪ್ಪತ್ತಕ್ಕೂ ಹೆಚ್ಚು ಕಾರ್ಯಕರ್ತರು ಈ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದರು. ಅದಮ್ಯಚೇತನ ಸಂಸ್ಥೆಯ ಸಹಯೋಗದಲ್ಲಿ ಬಳ್ಳಾರಿಯ ಸಮೃದ್ಧಿ ಫೌಂಡೇಶನ್ ಸದಸ್ಯರೂ ರಾಯಚೂರಿನ ಸ್ವಯಂಸೇವಾ ಸಂಸ್ಥೆಯ ಕಾರ್ಯಕರ್ತರೂ ಹಸಿರು ಭಾನುವಾರ ಕಾರ್ಯಕ್ರಮವನ್ನು ನಡೆಸುತ್ತಿರುವುದು ಸಂತಸದ ವಿಷಯ. ★



# ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )




ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಪಬ್ಲಿಕ್ ಟಿವಿ ವತಿಯಿಂದ 'ನಾರಿ ನಾರಾಯಣಿ' ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ ಡಾ. ತೇಜಸ್ವಿನಿ ಅನಂತಕುಮಾರ್



ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಶ್ರೀ ಮಹೇಶ ಶರ್ಮಾ ಅವರು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದ ಸಂದರ್ಭದ ಚಿತ್ರ.







ಅದಮ್ಯಚೇತನದ ಅಧ್ಯಕ್ಷರಾದ ಡಾ.ತೇಜಸ್ವಿನಿ ಅನಂತಕುಮಾರ್ ಅವರ ಹುಟ್ಟುಹಬ್ಬದ ಸಂಭ್ರಮದಲ್ಲಿ ಅದಮ್ಯಚೇತನ ಕಾರ್ಯಕರ್ತರು ಹಾಗೂ ಸಿಬ್ಬಂದಿಯವರು ಪಾಲ್ಗೊಂಡಿದ್ದರು.





ಅದಮ್ಯ ಚೇತನದಲ್ಲಿ ಪ್ರತಿ ಗುರುವಾರ ಸಂಜೆ ಗೀತಾ ಪಠಣ ಕಾರ್ಯಕ್ರಮ ನಡೆಯುತ್ತಿದ್ದು ಅನೇಕ ಕಾರ್ಯಕರ್ತರು ಶ್ರದ್ಧಾಪೂರ್ವಕ ಪಾಲ್ಗೊಳ್ಳುವುದಲ್ಲದೆ ಪಠಣದ ನಂತರ ಅಡುಗೆ ಮನೆಯಲ್ಲಿ ತರಕಾರಿ ಹೆಚ್ಚುವ ಕೆಲಸಗಳಲ್ಲಿ ನೆರವು ನೀಡುತ್ತಿದ್ದಾರೆ




324 ನೇ ಹಸಿರು ಭಾನುವಾರ ಕಾರ್ಯಕ್ರಮವು ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಜರುಗಿತು .ವೈದ್ಯರಾದ ಡಾ.ಜಯಶೀಲಾ ಮತ್ತು ಅವರ ತಂಡದವರು ಉಪಸ್ಥಿತರಿದ್ದರು.



ಅದಮ್ಯಚೇತನದ ದೇಗುಲ ದರ್ಶನ ತಂಡದ ಸದಸ್ಯರು ಹಾಸನ ಜಿಲ್ಲೆಯ ಪ್ರವಾಸದ ಸಂದರ್ಭದಲ್ಲಿ ದೇವಾಲಯದ ಅರ್ಚಕರನ್ನು ಗೌರವಿಸುತ್ತಿರುವ ಚಿತ್ರ



ಅನಂತಕುಮಾರ್ ಅವರ ಬಂಧುಗಳಾದ ಅಮೆರಿಕಾದ ಡಾ.ಉಷಾ ಸತೀಶ್ ಮತ್ತು ಕುಟುಂಬದವರು ಅದಮ್ಯ ಚೇತನಕ್ಕೆ ಭೇಟಿ ನೀಡಿದ ಸಂದರ್ಭದ ಚಿತ್ರ

## ಅನಂತ ಚಿತ್ರಸಂಪುಟ

ಶ್ರೀ ಅನಂತಕುಮಾರ್ ಅವರು ನಿರಂತರವಾಗಿ ಪ್ರವಾಸ ಕೈಗೊಳ್ಳುತ್ತಾ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಡನೆ ಶ್ರಮವಹಿಸಿ ದುಡಿದ ಕಾರಣದಿಂದ ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷವು ಸುಭದ್ರವಾಗಿ ನೆಲೆಯೂರಲು ಸಾಧ್ಯವಾಯಿತು.























